# ಮಹಿಳಾ ವಿಶೇಷ

## MAHILA VISHESHA

RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಜುಲೈ July 1-31 -2019

Vol: 4 Issue : 11 **47** Pages : 16 Price: Rs.10/-

ಸಂಪುಟ: 4 ಸಂಚಿಕೆ: 11 ಪುಟ : 16 ಬೆಲೆ: ರೂ. 10/–

ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 9243584444 / 8880334444






for Programmes and Advertisement Contact:

**7259972615/ 9845006686/ 9243584444**




ಪ್ರಥಮ ಏಕಾದಶೀ, ಗುರು ಪೂರ್ಣಿಮಾ, ದಕ್ಷಿಣಾಯನ ಪುಣ್ಯಕಾಲ, ಸಂಕಷ್ಟಹರ ಚತುರ್ಥಿ, ಶ್ರೀ ಚಾಮುಂಡೇಶ್ವರಿ ಜನ್ಮದಿನೋತ್ಸವ ಹಾಗೂ ಆಷಾಢದ ಪ್ರಯುಕ್ತ ಎಲ್ಲಾ ಓದುಗರಿಗೂ ಹಾಗೂ ಹಿತೈಷಿಗಳಿಗೂ ಶುಭಾಶಯಗಳು

# ನಾವು ಏಕೆ "ಓಂ" ಕಾರವನ್ನು ಜಪಿಸುತ್ತೇವೆ?

ಶಬ್ದಬ್ರಹ್ಮ ಅಥವಾ ನಾದಬ್ರಹ್ಮನ ಸಂಕೇತವಾಗಿ ಓಂಕಾರವನ್ನು ಜಪಿಸುವುದು ಭಾರತೀಯರ ಒಂದು ವಿಶಿಷ್ಟವಾದ ಲಕ್ಷಣ. ಜಪಿಸುವವನ ಶರೀರ ಹಾಗೂ ಮನಸ್ಸುಗಳ ಮೇಲೆ ಮತ್ತು ಅವನ ಸುತ್ತಮುತ್ತ ಇರುವ ಪರಿಸರದ ಮೇಲೆ ವಿಶೇಷ ಹಾಗು ವ್ಯಾಪಕವಾದ ಪರಿಣಾಮವನ್ನು ಉಂಟುಮಾಡಬಲ್ಲದು. ಸಾಮಾನ್ಯ ವಾಗಿ ಎಲ್ಲ ಮಂತ್ರಗಳೂ, ವೇದಲ್ಲಿರುವ ಶಾಂತಿಪಾಠ ಗಳೂ (ಪ್ರಾರ್ಥನೆಗಳೂ); ಓಂಕಾರದಿಂದಲೇ ಪ್ರಾರಂಭವಾಗುತ್ತವೆ. ಎಲ್ಲ ಶುಭ ಆಚರಣೆಗಳೂ ಓಂಕಾರದಿಂದ ಶುರುವಾಗುತ್ತವೆ. ಇತರರನ್ನು ಪರಸ್ಪರ ಸಂದರ್ಶಿಸಿದಾಗಲೂ – "ಓಂ", "ಹರಿಃ ಓಂ" ಇತ್ಯಾದಿ ಯಾಗಿ ಸಂಬೋಧಿಸುವುದುಂಟು. "ಓಂಕಾರ"ವನ್ನೇ ಒಂದು ಬೀಜಮಂತ್ರವನ್ನಾಗಿ ಜಪಿಸುವುದು ಅಥವಾ ಧ್ಯಾನಿಸುವ ಕ್ರಮವುಂಟು. "ಓಂ" – ಇದರ ಆಕಾರವನ್ನು ಪೂಜಿಸಿ, ಧ್ಯಾನಿಸಲಾಗುವುದು ಮತ್ತು ಶ್ರೇಯಸ್ಕರವಾದ ಚಿಹ್ನೆಯೆಂದು ಗುರುತಿಸಲಾಗುವುದು.

ನಾವು ಓಂಕಾರವನ್ನು ಏಕೆ ಜಪಿಸುತ್ತೇವೆ?

"ಓಂ" – ಇದು ವಿಶ್ವಾತ್ಮನಾದ ಪರಮಾತ್ಮನ ನಾಮ. 'ಅ', 'ಉ' ಮತ್ತು 'ಮ್' ಎಂಬ ಮೂರು ಅಕ್ಷರಗಳ ಸಂಗಮವೇ – ಓಂ (ಅ+ಉ+ಮ್=ಓಂ). 'ಅ'ಕಾರ ದಿಂದಲೇ ಶಬ್ದವು ಗಂಟಲಿನ ಮೂಲಕ ಉಗಮ ವಾಗುವುದು; ಮಧ್ಯಭಾಗದ ಶಬ್ದವು ಇರುವುದೇ 'ಉ'ಕಾರದಲ್ಲಿ ಹಾಗೂ ಬಾಯಿಯನ್ನು ಮುಚ್ಚಿ ಹೊರಬರುವ ಶಬ್ದವೇ ಮುಕ್ತಾಯವಾಗುವ 'ಮ್'ಕಾರ. ಈ ಮೂರು ಅಕ್ಷರಗಳು ತ್ರಿಪುಟಿಗಳನ್ನು ಸೂಚಿಸುತ್ತವೆ. ಉದಾ: ಮೂರು ಅವಸ್ಥೆಗಳು (ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ), ತ್ರಿಮೂರ್ತಿ ದೇವತೆಗಳು (ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ), ಮೂರು ವೇದಗಳು (ಋಕ್, ಯಜುಸ್ ಮತ್ತು ಸಾಮ), ತ್ರಿಲೋಕಗಳು (ಭೂಃ ಭುವಃ ಮತ್ತು ಸುವಃ) ಇತ್ಯಾದಿ. ಪರಮಾತ್ಮನು ಇವೆಲ್ಲವೂ ಹಾಗೂ ಇವುಗಳಿಗಿಂತಲೂ ಅತೀತವಾಗಿ

**ಒಳ ಪುಟಗಳಲ್ಲಿ....**


| | |
|---|---|
| ನಾವು ಏಕೆ "ಓಂ" ಕಾರವನ್ನು ಜಪಿಸುತ್ತೇವೆ? | 2 |
| ಚಂದದ ಚಂದೇರಿ ಸೀರೆ | 4 |
| ಕನಕ ಚಂಪಾ | 6 |
| ನಾಯಕತ್ವದಲ್ಲಿ ಸ–ರಿ–ಗ–ಮ–ಪ | 7 |
| ಕೇರಳ ಪ್ರವಾಸಿಗರ ಆಕರ್ಷಣೆಯ ತಾಣ | 9 |
| ಅಗಾಧ ಪ್ರಮಾಣದ ಮಳೆನೀರು ಸಂಗ್ರಹ | 10 |
| ನಕ್ಕರೆ ಅದೇ ಸ್ವರ್ಗ | 14 |




ರುತ್ತಾನೆ. ರೂಪಾತೀತ, ಗುಣಾ ತೀತನಾಗಿರುವ ಪರ ಮಾತ್ಮನನ್ನು (ಬ್ರಹ್ಮನ್) – ಎರಡು ಓಂಕಾರದ ಜಪದ ಮಧ್ಯದಲ್ಲಿ ಉಂಟಾ ಗುವ ಮೌನ ಲ್ಲಿ ಗುರು ತಿಸಬೇಕು. ಓಂಕಾರ ವನ್ನು "ಪ್ರಣವ" ವೆಂದೂ ಕರೆಯುವುದುಂಟು. ಅಂದರೆ, "ಯಾವ ಶಬ್ದದ ಮೂಲಕ ಪರಮಾತ್ಮನನ್ನು ಸ್ತುತಿಸಲ್ಪಡುವುದೋ ಅದು ಪ್ರಣವ". ವೇದದ ಸಮಗ್ರ ಜ್ಞಾನ–ಸಾರವು ಓಂಕಾರದಲ್ಲಿ ಪ್ರತಿಷ್ಠಿತವಾಗಿದೆ.

"ಓಂ" ಮತ್ತು "ಅಥ" ಎಂಬ ಪದಗಳನ್ನು ಉಚ್ಚ ರಿಸಿಯೇ ಪರಮಾತ್ಮನು ಈ ಜಗತ್ತನ್ನು ಸೃಷ್ಟಿಸಿದ ನೆಂಬುದು ಶಾಸ್ತ್ರಜ್ಞರ ಅಭಿಮತ. ಆದಕಾರಣ, ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮುನ್ನ ಓಂಕಾರವನ್ನು ಜಪಿಸಿದರೆ, ಅದರ ನಾದ ನಮ್ಮೆಲ್ಲರ ಅಂತರಾಳದಲ್ಲಿ ಹೊಕ್ಕು, ಶುಭ ಹಾಗೂ ಉತ್ತಮವಾದ ಫಲಗಳನ್ನು ನೀಡಬಲ್ಲದು.

"ಓಂ"ಕಾರದ ಜಪವು ಘಂಟಾನಾದದ ಶಬ್ದವನ್ನು ಹೋಲುವಂತಿರಬೇಕು. ಇದು ಮನಸ್ಸಿಗೆ ಆಹ್ಲಾದಕರ ವಾದ ಪ್ರಶಾಂತತೆಯ ಅನುಭವವನ್ನು ಉಂಟುಮಾಡಿ, ಏಕಾಗ್ರಚಿತ್ತದಲ್ಲಿ ಈ ಲೋಕವನ್ನು ಪರಿಪೂರಿತನಾದ ಮಯವನ್ನಾಗಿ ಮಾಡುತ್ತದೆ. ಜನರು "ಓಂಕಾರ"ದ ಉಪಾಸನೆಯನ್ನು ಮಾಡಿ, ಇದರ ಗೂಢಾರ್ಥವನ್ನು ತಿಳಿದುಕೊಂಡು ಧ್ಯಾನಮಗ್ನರಾಗಿ ಜೀವನ್ಮುಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುವರು.

"ಓಂ"ಕಾರವನ್ನು ಬೇರೆ ಬೇರೆ ಕಡೆ, ಬೇರೆ ಬೇರೆ ರೀತಿಯಲ್ಲಿ ಬರೆಯುವುದುಂಟು. ಆದರೂ ಅತ್ಯಂತ ಬಳಕೆಯಲ್ಲಿರುವ ಆಕಾರ ಗಣಪತಿಯನ್ನು ಪ್ರತಿಬಿಂಬಿ ಸುತ್ತದೆ. ಮೇಲಿನ ಅರ್ಧವೃತ್ತಾಕಾರವು ಶಿರವನ್ನೂ, ಕೆಳಗಿನ ದೊಡ್ಡದಾದ ಅರ್ಧವೃತ್ತವು ಉದರವನ್ನೂ, ಪಕ್ಕದಲ್ಲಿರುವ ಬಾಲವು ಸೊಂಡಿಲನ್ನೂ ಹಾಗೂ ಮೇಲಿನ ಅರ್ಧಚಂದ್ರಾಕಾರ ಮತ್ತು ಅದರೊಳಗಿರುವ ಬೊಟ್ಟು ಗಣಪತಿಯ ಕೈಯಲ್ಲಿರುವ ಮೋದಕವನ್ನೂ ಸೂಚಿಸುತ್ತವೆ.

ಹೀಗೆ, "ಓಂ"ಕಾರವು ಸಾಧನ ಮತ್ತು ಸಾಧ್ಯ, ಜಗತ್ತು ಮತ್ತು ಈಶ್ವರ, ಲೌಕಿಕ ಮತ್ತು ಪಾರಮಾರ್ಥಿಕ, ಸಗುಣ ಮತ್ತು ನಿರ್ಗುಣ ಇವೆಲ್ಲವನ್ನೂ ಸೂಚಿಸುತ್ತದೆ.

## ನನ್ನ ಮಾತು





# ಯಾರು ಹಿತವರು ಈ ಮೂವರೊಳಗೆ?

ರಾಜಕೀಯ ನಾಯಕರುಗಳು ಮತದಾರರನ್ನೇ ದೇವರು. ಅವರಿಗಾಗಿಯೇ ನಾವಿರುವುದು ಎಂದು ಹೇಳುವುದು ಸರ್ವೇ ಸಾಮಾನ್ಯ. ಚುನಾವಣಾ ವೇಳೆಯಲ್ಲಿ ನಾಯಕರುಗಳು ಮತದಾರನ ಮನೆಬಾಗಿಲಿಗೆ ಬರುತ್ತಾರೆ ಅನಂತರ ಮತದಾರನೇ ಅವರ ಮನೆ ಬಾಗಿಲಿಗೆ ಅಲೆಯಬೇಕು.

ಯಾರೇ ರಾಜಕೀಯ ನಾಯಕರುಗಳೇ ನಿಮ್ಮ ಬಳಿ ಇರುವ ಆಸ್ತಿಪಾಸ್ತಿ 2–3 ತಲೆಮಾರಿನವರು ಖರ್ಚು ಮಾಡಿದರೂ ಇನ್ನೂ ಉಳಿಯುತ್ತದೆ. ಹೀಗಿದ್ದರೂ ಇನ್ನು ಏಕೆ ನಿಮಗೆ ಅಧಿಕಾರ ಬೇಕು? ಯುವ ಪೀಳಿಗೆಗೆ ತಾವುಗಳು ದಾರಿದೀಪವಾಗಿ ಪಕ್ಷದ ಕಾರ್ಯಕರ್ತರುಗಳಿಗೆ ನಾಯಕನಾಗಲು ಅವಕಾಶ ಮಾಡಿಕೊಡಿ.

ರಾಜಕೀಯ ನಾಯಕರುಗಳೇ ನೀವು ಸತ್ಯವನ್ನು ಹೇಳುತ್ತೀರೋ ಅನ್ಯಾಯುವನ್ನು ವಾಡಿಲ್ಲವೆಂದು, ಅಕ್ರಮ ಸಂಪಾದನೆ ಮಾಡಿಲ್ಲವೆಂದು, ಆಡಿದ ಮಾತಿನಂತೆ ನಡೆದಿದ್ದೇನೆ ಅಥವಾ ನಡೆಯುತ್ತಿದ್ದೇನೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವವರು ಯಾರಿದ್ದಾರೆ?

ಗ್ರಾಮದ ಸಮಸ್ಯೆ ಏನೆಂಬುದನ್ನು ತಿಳಿಯಲು ಗ್ರಾಮದ ಜನ ಹೇಗೆ ವಾಸಿಸುತ್ತಿದ್ದಾರೆ ಎಂದು ತಿಳಿಯಲು ಹಠಾತ್ತನೆ ಭೇಟಿ ಮಾಡಿ ಅವರಂತೆ ಇದ್ದು ತಿಳಿಯಬೇಕು. ಬೆಟ್ಟಗುಡ್ಡಗಳಲ್ಲಿ ನಡೆಯಬೇಕು. ಕೆರೆಕಟ್ಟೆಯ ನೀರನ್ನು ಕುಡಿಯಬೇಕು. ಅದು ಬಿಟ್ಟು ಎಂದಿನಂತೆ ಇರುವುದಾದರೆ ಅದು ಅರ್ಥವಾಗುವುದಿಲ್ಲ.

ರಾಜಕೀಯ ನಾಯಕರುಗಳು ಸರ್ಕಾರಿ ಆಸ್ಪತ್ರೆಯ ಅನುಭವ ವನ್ನು ಅನುಭವಿಸಬೇಕು. ಸರ್ಕಾರಿ ಬಸ್‌ಗಳಲ್ಲಿ ಓಡಾಡಬೇಕು. ಸರ್ಕಾರಿ ಕಚೇರಿಗಳಲ್ಲಿ ಕ್ಯೂನಲ್ಲಿ ನಿಂತು ಅದರ ಕಷ್ಟವನ್ನು ಅನುಭವಿಸಬೇಕು. ಸರ್ಕಾರಿ ಶಾಲೆಗಳಲ್ಲಿ ನಿಮ್ಮ ಮಕ್ಕಳು ಮತ್ತು ನಿಮ್ಮ ಮೊಮ್ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬೇಕು. ಸರ್ಕಾರಿ ಕಚೇರಿಗಳಲ್ಲಿ ನಡೆಯುವ ಎಲ್ಲಾ ಬಗೆಯ ಕಾರ್ಯಗಳನ್ನು ನೀವೇ ಖುದ್ದಾಗಿ ನೋಡಿ ಯಾವ ರೀತಿ ಬದಲಾವಣೆ ತರಬೇಕು. ಅದರಂತೆ ಆಲೋಚಿಸಿ ತಂದರೆ ಸರ್ಕಾರದ ಕೆಲಸಕಾರ್ಯಗಳು ಹೇಗೆ ನಡೆಯುತ್ತವೆ ಎಂಬುದು ನಿಮಗೆ ತಿಳಿದರೆ ಅಷ್ಟು ಸಾಕು.

ನಿಮಗೆ ನೀವೇ ನಿಮ್ಮ ಮಟ್ಟದಲ್ಲಿ ಮನಬಂದಂತೆ ವರ್ತಿಸಿದರೆ ಮತದಾರನ ಮತ ಏಕೆ ಬೇಕು? ನೀವು ಹೇಳಿದಂತೆ ನಡೆಯದೇ ಇರುವುದು ನೀವು ಹೇಳಿದಂತೆ ಮತದಾರರು ಕೇಳಿಕೊಳ್ಳಬೇಕು ಎನ್ನುವುದಾದರೆ ಅದಕ್ಕೆ ನೀವೇ ಆಗಬೇಕಾ? ಅದು ಬೇರೆಯವರಿಗೆ ಬರುವುದಿಲ್ಲವೆ? ಮತದಾರ ಪ್ರಭುವನ್ನು ಯಾರು ಗೌರವಿಸುತ್ತಾರೋ ಆತನ ಜೊತೆಯಲ್ಲಿ ಇರುತ್ತಾರೋ ನಿಮ್ಮ ಸಿಂಹಾಸನ ಗಟ್ಟಿ. ಇಲ್ಲವಾದರೆ ಸಿಂಹಾಸನ ಬೇರೆಯವರ ಪಾಲು.

ಸಂಪಾದಕ

**ಹೆಚ್.ವಿ. ಸುಬ್ಬರಾವ್**, ನಿವೃತ್ತ ಸಾ.ಶಿ.ಇ. ನೌಕರ


## ಮಹಿಳಾ ವಿಶೇಷ

**ಕನ್ನಡ ತಿಂಗಳ ಪತ್ರಿಕೆ**

**ಜುಲೈ 1 ರಿಂದ 31–2019**

**ಸಂಪುಟ 4, ಸಂಚಿಕೆ 11,**

**ಪುಟ 16 ಬೆಲೆ ರೂ.: 10**

**MAHILA VISHESHA**

**KANNADA MONTHLY**

**July 1 to 31 -2019**

Vol : 4 **Issue : 11**

**Pages : 16 Price : Rs.10/-**

**ಮುಖಪುಟ :**

**ಶ್ರೀ ಮಹಾಲಕ್ಷ್ಮಿ ದೇವಸ್ಥಾನ, ಕೊಲ್ಲಾಪುರ**

**ಗೌರವ ಸಂಪಾದಕರು :**

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

**ಸಂಪಾದಕರು :**

**ಹೆಚ್.ವಿ. ವೆಂಕಟಸುಬ್ಬರಾವ್**

**ಮೊಬೈಲ್ 9243584444**

**ಉಪಸಂಪಾದಕರು :**

**ಎಸ್.ವೆಂಟಕರವಣಪ್ಪ**

**ಎಂ.ಆರ್. ಜಯಪ್ರಕಾಶ ನಾರಾಯಣ**

**ಭಾಸ್ಕರ್ ಹೆಚ್.ವಿ.**

**ಎಸ್.ಆರ್. ಅನಿಲ್‌ಕುಮಾರ್**

**ಕಚೇರಿ ವಿಳಾಸ :**

**ಮಹಿಳಾ ವಿಶೇಷ**

**ರೂಂ. ನಂ. 03, ಸಿಟಿ ಬಸ್‌ಸ್ಟ್ಯಾಂಡ್ ಕಟ್ಟಡ,**

**2ನೇ ಮಹಡಿ, ಕೆ.ಆರ್. ಸರ್ಕಲ್,**

**ಮೈಸೂರು – 570001**

**E-mail:**

**mahilavishesha15@gamil.com**

**Web: www.mahilavishesha.in**

**Whatsapp No : 8880334444**

# ಚಂದದ ಚಂದೇರಿ ಸೀರೆ



ಸೀರೆಗಳಲ್ಲಿನ ವೈವಿಧ್ಯ, ವಿನ್ಯಾಸ ನಿಜಕ್ಕೂ ಬೆರಗು ಮೂಡಿಸುತ್ತದೆ. ಸೀರೆಯ ಆದರಲ್ಲೂ ರೇಷ್ಮೆ ಸೀರೆಯ ವ್ಯಾಮೋಹಕ್ಕೆ ವಯಸ್ಸಿನ ಭೇದವಿಲ್ಲ. ಮ್ಯಾಕ್ಸಿ, ಮಿಡಿ ಚೂಡಿದಾರ ತೊಡುವವರು ಕೂಡ ಒಂದಾದರೂ ರೇಷ್ಮೆ ಸೀರೆ ಇಟ್ಟುಕೊಂಡಿರುತ್ತಾರೆ, ಸಾಂಪ್ರದಾಯಿಕ ಚೆಲುವು ಹಾಗೂ ಆಧುನಿಕತೆಯು ಮೆರಗು ಎರಡನ್ನೂ ಪರಿಣಾಮಕಾರಿಯಾಗಿ ಬಿಂಬಿಸುವ ಭಾರತದ ಶ್ರೇಷ್ಠ ನೇಯ್ಗೆ ಕೇಂದ್ರಗಳಲ್ಲಿ ಚಂದೇರಿ ಕೂಡ ಒಂದು.

ಮಧ್ಯಪ್ರದೇಶದ ಗುಣ ಜಿಲ್ಲೆಯ ನರ್ಮದಾ ನದಿಯ ತಟದಲ್ಲಿರುವ ಈ ಪುಟ್ಟ ಪಟ್ಟಣ ತನ್ನ ಕೈಮಗ್ಗದ ವಿಶಿಷ್ಟ ನವಿರಾದ ಹತ್ತಿ, ಹತ್ತಿಮಿಶ್ರಿತ ರೇಷ್ಮೆ ಹಾಗು ರೇಷ್ಮೆ ಸೀರೆಗಳಿಗಾಗಿ ಸುಪ್ರಸಿದ್ಧ. ಒಂದು ಕಾಲಕ್ಕೆ ಹತ್ತಿ ಸೀರೆಗಳಂತೂ ಢಾಕಾ ಮಸ್ಲಿನ್‌ನಷ್ಟೇ ಖ್ಯಾತಿ ಹೊಂದಿ ದಂತಕತೆಯೆನಿಸಿದ್ದವು. ಈ ಸೀರೆಗಳು ಇಂದಿಗೂ ತಮ್ಮ ವಿಶಿಷ್ಟ ನೇಯ್ಗೆ, ವಿನ್ಯಾಸಗಳು, ಕಣ್ಣಿಗೆ ತಂಪೆನಿಸುವ ಹಿತಕರ ಬಣ್ಣಗಳು, ಹೊಳಪು ಹಾಗೂ ಅರೆ ಪಾರದರ್ಶಕ ಗುಣಗಳಿಂದಾಗಿ ತುಂಬ ಬೇಡಿಕೆಯಲ್ಲಿವೆ. ತಮ್ಮ ಮೋಹಕತೆಗೆ ಮಂತ್ರ ಮುಗ್ಧರಾಗಿರುವ ಅಭಿಮಾನಿಗಳ ಒಂದು ದೊಡ್ಡ ಬಳಗವನ್ನೇ ಸೃಷ್ಟಿಸಿಕೊಂಡಿದೆ ಈ ಸೀರೆ. ಈ ಸೀರೆಯ ಕುರಿತಾಗಿ ಮಹಾಭಾರತದಲ್ಲಿ ಕೂಡ ಅನೇಕ ಉಲ್ಲೇಖಗಳಿವೆ.

ಚಂದೇರಿ ನೇಯ್ಗೆಯು ದೊಡ್ಡ ಪ್ರಮಾಣದಲ್ಲಿ ಕೈಮಗ್ಗಗಳನ್ನು ಅವಲಂಬಿಸಿದೆ. ಭಾರತದ ಅತ್ಯಂತ ಉತ್ಕೃಷ್ಟ, ಕಲಾತ್ಮಕ ಬಟ್ಟೆ ಈ ಸರಳ ಕೈಮಗ್ಗಗಳಲ್ಲಿ ಮೂಡಿ ಬರುತ್ತದೆ. ಅತ್ಯಂತ ಕಲಾತ್ಮಕವಾಗಿ ನೇಯ್ದ ಚಂದೇರಿ ಸೀರೆಗಳಿಗೆ ಇಂದಿಗೂ ಭಾರಿ ಬೇಡಿಕೆ ಇದೆ.

ಕ್ರಿಸ್ತ ಶಕ 1350 ಕ್ಕಿಂತ ಮೊದಲು ಚಂದೇರಿ ನೇಯ್ಗೆ ಮುಸ್ಲಿಮ್ ಸಮುದಾಯಕ್ಕೆ ಮಾತ್ರ ಮೀಸಲಾಗಿತ್ತು. ನಂತರ ಕೋಷ್ಟಿ ನೇಕಾರರು ಚಂದೇರಿಗೆ ಬಂದು ಅಲ್ಲಿಯೇ ನೆಲೆನಿಂತು ಈ ನೇಯ್ಗೆ ಪ್ರಕಾರವನ್ನು ಜನಪ್ರಿಯಗೊಳಿಸಿದರು ಎಂದು ಹೇಳಲಾಗುತ್ತದೆ. ಮೊಘಲರ ಕಾಲದಲ್ಲಿ ಚಂದೇರಿ ನೇಯ್ಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಒಂದು ಸಾರಿ, ಪುಟ್ಟ ಬೊಂಬಿನಲ್ಲಿ (ಬಿದಿರು) ಸುರಳಿ ಸುತ್ತಲಾಗಿದ್ದ ಚಂದೇರಿ ವಸ್ತ್ರವೊಂದು ಅಕ್ಬರ್ ಬಾದಶಹನಿಗೆ ಕಾಣಿಕೆಯಾಗಿ ಬಂತು. ಬಿಚ್ಚಿ ನೋಡಿದರೆ ಒಂದು ದೊಡ್ಡ ಆನೆಯನ್ನೇ ಮುಚ್ಚಬಲ್ಲಷ್ಟು ದೊಡ್ಡದಾದ ಕಲಾತ್ಮಕ ಚಂದೇರಿ ವಸ್ತ್ರ!

ಮೊದ ಮೊದಲು ಕೇವಲ ಹತ್ತಿ ವಸ್ತ್ರಗಳಿಗೆ ಮಾತ್ರ ಸೀಮಿತವಾಗಿದ್ದ ಚಂದೇರಿ ನೇಯ್ಗೆ, ಔದ್ಯೋಗೀಕರಣದ ಗಾಳಿ ಬೀಸಿದ ಮೇಲೆ ತನ್ನ ಢಾಕಾ ಮಸ್ಲಿನ್ ಖ್ಯಾತಿಯನ್ನು ಕಳೆದುಕೊಂಡಿತು. ಬ್ರಿಟಿಷರು ಆಮದು ಮಾಡಿಕೊಂಡ ಚಂದೇರಿ ನೇಯ್ಗೆಗೆ ಸೂಕ್ತವಲ್ಲದ ಮ್ಯಾಂಚೆಸ್ಟರ್ ಹತ್ತಿ ನೂಲಿನಿಂದಾಗಿ ಈ ಉದ್ಯಮ ಸಂಕಷ್ಟಕ್ಕೆ ಗುರಿಯಾಯಿತು. ಹೀಗಾಗಿ ಅನಿವಾರ್ಯವಾಗಿ ನೇಕಾರರು ಹಾಸಿಗಾಗಿ ರೇಷ್ಮೆ ನೂಲಿನತ್ತ ಗಮನಹರಿಸಿದರು. ಚಂದೇರಿಗೆ ರೇಷ್ಮೆ ಲಗ್ಗೆ ಇಟ್ಟದ್ದೇ ಈ ರೀತಿಯಾಗಿ 1930ರ ಸುಮಾರಿಗೆ ಜಪಾನಿನ ರೇಷ್ಮೆಯ ಆಗಮನದೊಂದಿಗೆ ರೇಷ್ಮೆ ಸೀರೆಗಳ ಉತ್ಪಾದನೆ ಹೆಚ್ಚಾಯಿತು.

ಕೈಮಗ್ಗದಲ್ಲಿ ನೇಕಾರ ತನ್ನ ಭಾವನೆಗಳನ್ನು ಹಾಗೂ ಕಲ್ಪನೆಗಳನ್ನು ನೇಯ್ಗೆಯ ಮೂಲಕ ಅಭಿವ್ಯಕ್ತಗೊಳಿಸುತ್ತಾನೆ. ಈ ಗುಡಿಕಾರರ ಹಸ್ತನೈಪುಣ್ಯ, ಚಾಕಚಕ್ಯತೆ, ನವಿರಾದ ಸುಂದರ ವರ್ಣ ಸಂಯೋಜನೆಯ ಜಾಣ್ಮೆಯನ್ನು ನೋಡಿಯೇ ತಿಳಿಯಬೇಕು. ಸಾಮಾನ್ಯವಾಗಿ ಚಂದೇರಿ ಸೀರೆಗಳನ್ನು ಸಾಂಪ್ರದಾಯಿಕ ಪಿಟ್ ಲೂಮ್‌ಗಳಲ್ಲಿ ನೇಯಲಾಗುತ್ತಿದ್ದು, ಡಾಬಿ ಹಾಗೂ ಜಕಾರ್ಡ್‌ಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗುತ್ತಿತ್ತು. ಮೂರು ಶಟಲ್‌ಗಳ ಇಬ್ಬರು ನೇಕಾರರು ಬೇಕಾಗುವ ನಾಲ್ ಫೆರ್ನಾ ತಾಂತ್ರಿಕ ಮಗ್ಗಗಳಿಗಾಗಿ ಪ್ರಸಿದ್ಧಿ ಹೊಂದಿದ ಚಂದೇರಿಯಲ್ಲಿಂದು ಹೆಚ್ಚು ಕಡಿಮೆ ಎಲ್ಲವೂ ಮಗ್ಗಗಳೇ

## ನೇಯ್ಗೆ ತಂತ್ರ

ಚಂದೇರಿಯ ನೇಯ್ಗೆಯಲ್ಲಿ ಅನೇಕ ನೇಯ್ಗೆ ತಂತ್ರಗಳಿವೆ. ಉದಾಹರಣೆಗೆ ದೋಕಶಮಿ ಸೀರೆಗಳಲ್ಲಿ ಒಂದೇ ಸೀರೆಯ ಅಂಚುಗಳೆರಡೂ ಬೇರೆ ಬೇರೆ ಬಣ್ಣಗಳನ್ನು ಹೊಂದಿದ್ದರೆ (ಗಂಗಾ–ಜಮುನಾ) ಒಂದೇ ಅಂಚಿನ ಎರಡು ಬದಿಗಳಿಗೂ ಬೇರೆ ಬೇರೆ ವರ್ಣಗಳು ಬರುವಂತೆ ನೇಯಲಾಗುತ್ತಿತ್ತು. ಇಂದು ಇಂಥ ನೇಯ್ಗೆ ಅತ್ಯಂತ ಕಷ್ಟ ಸಾಧ್ಯ ಎಂದು ಹೇಳಬಹುದು. ಚಂದೇರಿಯ ನೇಯ್ಗೆ ಶೈಲಿಯನ್ನು ಇನ್ನಿತರ ನೇಯ್ಗೆ ಕೇಂದ್ರಗಳಲ್ಲಿ ಅನುಸರಿಸಿದರೂ ಅದಕ್ಕೆ ಚಂದೇರಿಯ ಸೀರೆಗಳಿಗಿರುವ ಬೆಡಗನ್ನು ಕೊಡುವುದು ಅಸಾಧ್ಯವೆಂದೇ ಹೇಳಬಹುದು. ಅಂದು ಮರಾಠ ರಾಜ ಕುಟುಂಬದವರಂತೂ ಚಂದೇರಿಯ ವಿಶಿಷ್ಟವಾದ ಆರು ಅಂಗುಲದ ವಿಶೇಷ ಮಗ್ಗಗಳಲ್ಲಿ ನೇಯ್ಗೆ ವಸ್ತ್ರಗಳಿಂದ ತಯಾರಿಸಿದ ಟರ್ಬನ್‌ಗಳನ್ನೇ (ರುಮಾಲು) ಬಳಸುತ್ತಿದ್ದರು. ಮಹಾರಾಷ್ಟ್ರದ ಪ್ರಖ್ಯಾತ ಪೈಠಣಿ ಪೀತಾಂಬರಗಳನ್ನು ಕೂಡ ಒಂದು ಕಾಲಕ್ಕೆ ಚಂದೇರಿಗೆ ನೇಯ್ಗೆಗಾಗಿ ಕಳುಹಿಸಲಾಗುತ್ತಿತ್ತು. ಇದು ಚಂದೇರಿ ನೇಕಾರರ ಕಲಾಕೌಶಲ್ಯಕ್ಕೆ ಹಿಡಿದ

ಕನ್ನಡಿ. ಚಂದೇರಿ ಸೀರೆ ತನ್ನ ಅನುಪಮತೆಯನ್ನು ಈ ತಾಂತ್ರಿಕ ಯುಗದಲ್ಲಿ ಸಹ ಬೆಳೆಸಿಕೊಂಡು ಬರಲು ಗುಡಿಕಾರರು ಚಾತುರ್ಯದಿಂದ ಈ ವಸ್ತ್ರಕ್ಕೆ ನೀಡುವ ಸೊಬಗೇ ಕಾರಣ.

ಚಂದೇರಿ ನೇಯ್ಗೆಗೆ ಬರೋಡದ ಮಹಾರಾಣಿ ಅಹಲ್ಯಾದೇವಿ ಹೋಳ್ಕರ್ ನೀಡಿದ ಪ್ರೋತ್ಸಾಹ ಬಹು ದೊಡ್ಡದು, ಈ ಸೀರೆಗಳ ಬಹು ದೊಡ್ಡ ಅಭಿಮಾನಿಯಾಗಿದ್ದ ಅವರು ಆ ನೇಯ್ಗೆ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು; ಆಕೆ ಚಂದೇರಿಯ ಹೊಸ ಸೀರೆಯನ್ನು ತನ್ನ ಕೆನ್ನೆಗೆ ಸೋಕಿಸಿಕೊಂಡು, ಗುಣಮಟ್ಟವನ್ನು ನಿರ್ಧರಿಸಿ ಅದರ ಮೌಲ್ಯವನ್ನು ಕರಾರುವಕ್ಕಾಗಿ ಹೇಳುತ್ತಿದ್ದರಂತೆ! ಚಂದೇರಿ ನೇಯ್ಗೆ ಅವರ ಕಾಲದಲ್ಲಿ ತುಂಬಾ ಪ್ರಸಿದ್ದಿಗೆ ಬಂದಿತ್ತು. ಆ ವಸ್ತ್ರಗಳ ನವಿರು, ನಾಜೂಕು, ಪಾರದರ್ಶಕ ಗುಣಗಳಿಂದಾಗಿ ಅವುಗಳಿಗೆ ನೇಯ್ದುಗಾಳಿ ಎಂಬ ಹೆಸರಿತ್ತು!

ಮೊಘಲರ ಕಾಲದಲ್ಲಿ ಚಂದೇರಿ ವಸ್ತ್ರಗಳಿಗೆ ಕೇಸರಿ ಹಾಗೂ ಹೂಗಳನ್ನು ಉಪಯೋಗಿಸಿ ಬಣ್ಣ ಹಾಕಲಾಗುತ್ತಿತ್ತು. ಶುಭ್ರ ಬಿಳಿಯ ಚಂದೇರಿ ಬಟ್ಟೆ ಕೇಸರಿಯಿಂದಾಗಿ ಹೊನ್ನ ವರ್ಣಕ್ಕೆ ತಿರುಗುತ್ತಿತ್ತು. ಅಷ್ಟೇ ಅಲ್ಲ, ಈ ವಸ್ತ್ರಗಳಿಂದ ನವಿರಾದ ಸುಗಂಧವೂ ಹೊರಹೊಮ್ಮುತ್ತಿತು. ಇಂತ ಶುದ್ಧ, ಪರಿಸರಸ್ನೇಹಿ ಚಂದೇರಿ ವಸ್ತ್ರಗಳು ಬಹುತೇಕ ರಾಜ ಮನೆತನದವರ ಇಲ್ಲವೇ ಶ್ರೀಮಂತ ವರ್ಗದವರಿಗೆ ಮಾತ್ರ ಮೀಸಲಾಗಿದ್ದವು. ಆದರೆ ಇಂದು ಚಂದೇರಿಯಲ್ಲೂ ಕೂಡ ರಾಸಾಯನಿಕ ಬಣ್ಣಗಳದ್ದೇ ದರ್ಬಾರು!

ಭಾರತೀಯ ವಸ್ತ್ರವಿನ್ಯಾಸದಲ್ಲಿ ಪ್ರಕೃತಿಯ ಕೊಡುಗೆ ಅತಿ ದೊಡ್ಡದು. ಪ್ರಕೃತಿಯ ಚೆಲುವಿನಿಂದ ಪ್ರೇರಣೆ ಪಡೆದ ಗುಡಿಕಾರನ ಕಲ್ಪನೆಗಳಿಗೆ ಇಲ್ಲಿ ರೆಕ್ಕೆ ಮೂಡುತ್ತದೆ. ಅಂತೆಯೇ ಹಸಿರೆಲೆಗಳು ಗಿಳಿಗಳಾಗಿ, ನಿಜ ಹಂಸವನ್ನು ನಾಚಿಸುವ ಕಲಾಕಾರನ ಕಲ್ಪನಾ ಹಂಸ ಇಲ್ಲಿ ವಿನ್ಯಾಸವಾಗಿ ಮೈದಳೆಯುತ್ತವೆ. ಎಲೆ, ಹೂ, ಹಣ್ಣು, ಪ್ರಾಣಿಗಳು, ನೇಕಾರನ ಮಾಯಾ ಹಸ್ತದಿಂದ ಚೆಲುವಿನ



ವಿನ್ಯಾಸಗಳಾಗಿ ಸಾಕಾರಗೊಳ್ಳುತ್ತವೆ. ವಿನ್ಯಾಸಗಳೆಷ್ಟೇ ಅಲ್ಲ ಸೀರೆಗಳ ಬಣ್ಣಗಳೂ ಕೂಡ ಪ್ರಕೃತಿಯಿಂದ ಪ್ರೇರಿತವಾದವುಗಳೇ!

ಬಹಳಷ್ಟು ಚಂದೇರಿ ಸೀರೆಗಳಲ್ಲಿ ಚಿನ್ನದ ಜರಿ ಅಂಚು ಹಾಗೂ ಸೆರಗಿನಲ್ಲಿ ಎರಡೆಳೆ ಚಿನ್ನದ ಜರಿ ವಿನ್ಯಾಸ ಸಾಮಾನ್ಯ. ಇದರ ಮೇಲೆ ಮಾಡುವ ಬುಟ್ಟಾ ಕೆಲಸ ಕೂಡ ವೈವಿಧ್ಯಮಯವಾಗಿರುತ್ತದೆ. ಆದರೆ ಇಂದು ಕಾಲ ಬದಲಾಗಿದೆ, ಸುಧಾರಣೆಯ ಗಾಳಿ ನೇಯ್ಗೆಯನ್ನೂ ಬಿಟ್ಟಿಲ್ಲ. ಮೂಲ ಕೆಡದಂತೆ ಮಾಡಲಾದ ಸಾಂಪ್ರದಾಯಿಕ ಕಲೆಯ ಅಲ್ಪ ಸ್ವಲ್ಪ ಬದಲಾವಣೆ ಈ ಸೀರೆಗಳಿಗೆ ಇನ್ನೂ ಹೆಚ್ಚಿನ ಬೇಡಿಕೆ ತರುತ್ತಿದೆ ಕೂಡ. ಹೊಸದು ಎಂದು ಮಾತ್ರಕ್ಕೆ ಸಂಪ್ರದಾಯ ವಿರೋಧಿ ಎಂದಲ್ಲವಲ್ಲ? ಹೊಸದಾದ ಮಾತ್ರಕ್ಕೆ ಅದು ಕಲಾ ಶುದ್ಧತೆ ಹಾಗೂ ಸಾಂಪ್ರದಾಯಿಕತೆಯನ್ನು ಪೂರ್ತಿ ತ್ಯಜಿಸಿದೆ ಎಂದರ್ಥವಲ್ಲ ಅಲ್ಲವೆ? ಇದೊಂದು ಹೊಸ ಬಗೆಯ ದೃಷ್ಟಿಕೋನ ಅಷ್ಟೆ. ಅದೇನೇ ಇರಲಿ ಹನ್ನೆರಡನೆ ಶತಮಾನದಿಂದಲೂ ಉಳಿದು ಬಂದಿದ್ದು ಒಂದೇ ಒಂದು; ಅದೇ ಚಂದೇರಿ ಸೀರೆಗಳ ಖ್ಯಾತಿ.

– ರಾಧಾಲಕ್ಷ್ಮಿ ವೈ.ಸಿ.


## ಉಚಿತ ಇ–ಕಾಮರ್ಸ್ ಶಿಕ್ಷಣ

### ಮೈಸೂರು ಹಾಗೂ ಸುತ್ತಮುತ್ತಲಿನ ಜನತೆಗೆ

**ವಿದ್ಯಾಭ್ಯಾಸ/ಮನೆಗೆಲಸ/ಬಿಡುವಿನ ವೇಳೆ ನಂತರ ಏನು.......? ಕೆಲಸ ಬೇಕೇ.....?**

ನಿಮಗೆ ಬೇಕಾದ ವಸ್ತು/ಸಾಮಾನುಗಳನ್ನು ಪ್ರತಿನಿತ್ಯ/ತಿಂಗಳು ಖರೀದಿಸುತ್ತಿರುವಿರೋ ಅದನ್ನೇ ಮೊಬೈಲ್ ಆಪ್ ಮೂಲಕ ನಮ್ಮಲ್ಲಿ ಖರೀದಿಸಿದರೆ ಉತ್ತಮ ಗುಣಮಟ್ಟದ ಸಾಮಾನು, ಹೋಲ್‌ಸೇಲ್ ದರದಲ್ಲಿ, ವಿಶೇಷ ಕೂಪನ್‌ಗಳೊಂದಿಗೆ ಮನೆಬಾಗಿಲಿಗೆ ತಂದುಕೊಡುವ ವ್ಯವಸ್ಥೆ. ನಿಮಗೆ ಉಳಿತಾಯ ಹಾಗೂ ಆದಾಯ ಬೇಕಿದ್ದಲ್ಲಿ ಈ ಶಿಕ್ಷಣವನ್ನು ಅರ್ಧ ಗಂಟೆಯಲ್ಲಿ ಪಡೆಯಿರಿ. ಇದು ಎಂ.ಎಲ್.ಎಂ ಅಲ್ಲ ಹಾಗೂ ಯಾವುದೇ ಶುಲ್ಕವನ್ನು ಕಟ್ಟಬೇಕಾಗಿಲ್ಲ. ಇದು ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಮಹಿಳೆಯರಿಗೆ ಅನುಕೂಲ.

ಇದರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಲು ಸಂಪರ್ಕಿಸಿ. **ನಂ: 8880334444**

# ಕನಕ ಚಂಪಾ

ಸ್ಟರ್ಕ್ಯೂಲಿಯೇಸೀ ಕುಟುಂಬಕ್ಕೆ ಸೇರಿದ ಈ ಮರದ ಆಂಗ್ಲ ಹೆಸರು ಡಿನ್ನರ್ ಪ್ಲೇಟ್ ಟ್ರೀ (Dinner Plate tree) ಎಂದು. ಹೆಸರೇ ಸೂಚಿಸುವಂತೆ ಇದರ ಎಲೆಗಳನ್ನು ಊಟ ಬಡಿಸಲು ಉಪಯೋಗಿಸುತ್ತಾರೆ. ಹಿಮಾಲಯದ ತಪ್ಪಲು ಹಾಗೂ ಬರ್ಮಾ ಮೂಲದ ಈ ಮರ, ನೀರಿನ ಸೆಲೆ ಇರುವ ಇತರ ಪ್ರದೇಶ ಗಳಲ್ಲಿಯೂ (ವಿಶೇಷತಃ ಪೂರ್ವ ಭಾರತದಲ್ಲಿ) ಕಾಣ ಸಿಗುತ್ತದೆ. ಸ್ಥಳೀಯವಾಗಿ ಕನಕ ಚಂಪಾ, ಮುಚಕುಂದ ಇತ್ಯಾದಿ ಹೆಸರುಗಳಿಂದ ಪರಿಚಿತವಾಗಿರುವ ಈ ಮರದ ಸಸ್ಯ ಶಾಸ್ತ್ರೀಯ ಹೆಸರು ಟೆರೋಸ್ಪರ್ಮಮ್ ಎಸಿರಿ ಫೋಲಿಯಂ (Pterospermum acerifolium) ಗ್ರೀಕ್ ಭಾಷೆಯಿಂದ ಉತ್ಪತ್ತಿಯಾದ ಈ ಹೆಸರಿನರ್ಥ ರೆಕ್ಕೆಯುಳ್ಳ ಬೀಜ ಹಾಗೂ ಮೇಪಲ್ ಎಲೆಯಂತಹ ಎಲೆಯುಳ್ಳದ್ದು ಎಂದು.

ನೈಸರ್ಗಿಕ ಪರಿಸರದಲ್ಲಿ 50–60 ಮೀ ಎತ್ತರದವರೆಗೆ ಬೆಳೆಯಬಲ್ಲ ಈ ಮರದ ಎಲೆಗಳೂ ಅಸಾಧಾರಣ ಗಾತ್ರವೇ. ಸುಮಾರು 30–35 ಸೆಂ.ಮೀ. ಉದ್ದ, 20–25 ಸೆಂ.ಮೀ. ಅಗಲದವರೆಗೆ ಬೆಳೆಯಬಲ್ಲ ಈ ಎಲೆಗಳು ದಪ್ಪವೂ ಇರುವುದರಿಂದ ನಮ್ಮಲ್ಲಿ ಬಾಳೆಎಲೆ, ಮುತ್ತುಗದೆಲೆಯ ಪತ್ರಾವಳಿ, ಅಡಿಕೆ ಹಾಳೆಯ ತಟ್ಟೆ ಇತ್ಯಾದಿಗಳಂತೆಯೇ ಊಟ ಬಡಿಸಲು, ತಿಂಡಿ ಬಡಿ ಸಲು, ತೆಗೆದಿಡಲು, ಪರಿಸರಸ್ನೇಹಿ ಟಿಫಿನ್ ಕ್ಯಾರಿಯರ್ ಗಳಂತೆ ಉಪಯೋಗಿಸಲ್ಪಡುತ್ತವೆ!

ಬೆಂಗಳೂರಿನಂತಹ ಮಹಾನಗರಗಳಲ್ಲಿಯೂ ಈ ಮರಗಳನ್ನು ರಸ್ತೆಯಂಚಿನಲ್ಲಿ ನೆರಳಿಗಾಗಿಯೂ, ಅಲಂ ಕಾರಿಕ ಸಸ್ಯವೆಂದೂ ಬೆಳೆಸಿರುವುದನ್ನು ಕಾಣಬಹುದು. ಇದರ ಅಗಲವಾದ ಶುಭ್ರವಾದ ಬಿಳಿ ಹೂಗಳು ತಮ್ಮ ವಿಶಿಷ್ಟವಾದ ರಚನೆಯಿಂದ ದೂರದಿಂದಲೇ ಗಮನ ಸೆಳೆಯುತ್ತವೆ. ಐದು ಎಸಳಿನ ಸಪೂರವಾದ ಪುಷ್ಪಪಾತ್ರೆ ತನ್ನೊಳಗೆ ಅಂಡಾಶಯ, ಪುಂಕೇಸರಗಳನ್ನು ಅಡಗಿಸಿಕೊಂಡಿರುವುದಲ್ಲದೆ ಹೊರಗಡೆ ದಪ್ಪವಾದ ಹಸಿರು ಮಿಶ್ರಿತ ಕಂದುಬಣ್ಣದ ಐದು ಎಸಳಿನ ಪತ್ರ ಪಾತ್ರೆಯಿಂದ ಆಚ್ಛಾದಿತವಾಗಿರುತ್ತದೆ.

ತೀಕ್ಷ್ಣ ವಾಸನೆಯ, ರಾತ್ರಿಯಲ್ಲೇ ಅರಳುವ ಹೂಗಳು ಬೆಳಗಾಗುವದರಲ್ಲಿ ಉದುರಿ ಮರದಡಿಯಲ್ಲೆಲ್ಲ ಸಮವಾಗಿ ಐದು ಭಾಗಗಳಲ್ಲಿ ಸುಲಿದ ಬಾಳೆಯ ಹಣ್ಣಿನ ಸಿಪ್ಪೆಗಳೇನೋ ಎಂಬ ಭ್ರಮೆ ಹುಟ್ಟಿಸುವಂತಿವೆ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಅರಳುವ ಹೂಗಳು ಕ್ರಮೇಣ ಕಂದುಬಣ್ಣದ ಕಾಯಿಗಳಾಗಿ ಮಾರ್ಪಾಟಾ ಗುತ್ತವೆ. ಬೆಳವಣಿಗೆ ತುಂಬ ನಿಧಾನವಾಗಿರುವದರಿಂದ ಈ ಮರಗಳು ಇತರ ಮರಗಳಿಗೆ ಹೋಲಿಸಿದರೆ ತುಂಬಾ



ವಿರಳ.

ಊಟಕ್ಕಲ್ಲದೇ ಈ ಮರದ ಇತರ ಉಪ ಯೋಗಗಳೂ ಮರದ ಹೂಗಳು ಕಷಾಯದ ರೂಪದಲ್ಲಿ ಬಾಯಿ ಹುಣ್ಣು ಕರುಳಿನ ಹುಣ್ಣು ಇತ್ಯಾದಿಗಳಿಗೆ ಔಷಧಿಯಾಗಿ ಮನೆ ಔಷಧಿಯಲ್ಲಿ ಉಪಯೋಗವಾಗು ತ್ತದೆ. ತೀಕ್ಷ್ಣವಾದ ವಾಸನೆಯಿಂದಾಗಿ ಕೀಟನಿರೋಧಕ ವಾಗಿಯೂ ಮನೆಯಲ್ಲಿ ಸುವಾಸನೆ ಹರಡಿಸುವುದಕ್ಕೂ ಉಪಯೋಗವಾಗುತ್ತವೆ.

ಎಲೆಗಳು ರಕ್ತಸ್ರಾವವನ್ನು ತಡೆಗಟ್ಟಲು ಉಪ ಯೋಗವಾಗುವುದಷ್ಟೇ ಅಲ್ಲ, ಚಪ್ಪರಗಳ ತಾತ್ಕಾಲಿಕ ಹೊದಿಕೆಯಾಗಿಯೂ ಬಳಕೆ ಆಗುತ್ತವೆ. ಇದರ ಕೆಂಬಣ್ಣದ ಕಟ್ಟಿಗೆ ಹಗುರವಾಗಿದ್ದು ಬಾಳಿಕೆ ಬರುವು ದರಿಂದ ತೆಳುವಾದ ಹಲಗೆ, ಪೆಟ್ಟಿಗೆ ಇತ್ಯಾದಿಗಳನ್ನು ತಯಾರಿಸಬಹುದು.

ಈ ಮರ ಹೇರಳವಾಗಿ ಬೆಳೆಯುವ ಪ್ರದೇಶದಲ್ಲಿ ಗ್ರಾಮೀಣ ಜನತೆಗೆ ಇದರ ಕಟ್ಟಿಗೆಯಿಂದ ಚಿಕ್ಕಪುಟ್ಟ ಆಟಿಕೆ ಸಾಮಾನು, ಅಲಂಕಾರಿಕ ವಸ್ತುಗಳನ್ನು ತಯಾರಿಸಲು ಸೂಕ್ತ ತರಬೇತಿ ನೀಡಿದಲ್ಲಿ ಅಗತ್ಯವುಳ್ಳ ವರಿಗೆ ಸ್ವಾವಲಂಬನೆಯ ದಾರಿಯೋ ಆದಾಯದ ಮೂಲವೋ ಆಗುತ್ತದೆ. ಎಲೆಗಳಿಂದ ಪತ್ರಾವಳಿಗಳನ್ನು ತಯಾರಿಸುವಿಕೆಯನ್ನು ಪ್ರೋತ್ಸಾಹಿಸಿದಲ್ಲಿ ಪ್ಲಾಸ್ಟಿಕ್ ಬಳಕೆಯು ಗಣನೀಯ ಪ್ರಮಾಣದಲ್ಲಿ ತಗ್ಗುವುದಲ್ಲದೆ ತನ್ಮೂಲಕ ಪರಿಸರ ಹಾನಿಯನ್ನೂ ತಗ್ಗಿಸುವುದರಲ್ಲಿ ಸಂದೇಹವಿಲ್ಲ.

–ರಶ್ಮಿ ಶ್ರೀನಿವಾಸ


**ಮಹಿಳಾ ವಿಶೇಷ**

ರೂಂ ನಂ. 03, 2ನೇ ಮಹಡಿ,
ಸಿಟಿ ಬಸ್‌ಸ್ಟ್ಯಾಂಡ್ ಕಟ್ಟಡ,
ಕೆ.ಆರ್. ಸರ್ಕಲ್,ಮೈಸೂರು 570001,
**ಮೊ: 9243584444**

# ನಾಯಕತ್ವದಲ್ಲಿ ಸ–ರಿ–ಗ–ಮ–ಪ–ದ–ನಿ–ಸ



ಸಂಸ್ಕತ ಶ್ಲೋಕವೊಂದರ ಕನ್ನಡ ಅನುವಾದ ಹೀಗಿದೆ, 'ಯಾವುದೇ ಭಾಷೆಯ ಅಕ್ಷರಮಾಲೆಯ ಯಾವುದೇ ಅಕ್ಷರವಿಲ್ಲದೆ ಪದ್ಯ ನೀತಿಗೆ ಗದ್ಯವಿಲ್ಲ, ಔಷಧೀಯ ಗುಣ ಹೊಂದಿರದ ಸಸ್ಯ ಇಲ್ಲವೇ ಇಲ್ಲ, ಒಂದಲ್ಲ ಒಂದು ಗುಣವಿಶೇಷ ಹೊಂದದ ವ್ಯಕ್ತಿ ಈ ಪ್ರಪಂಚದಲ್ಲಿಯೇ ಇಲ್ಲ. ಅಂತಹ ಯೋಗ್ಯತೆಗಳನ್ನು ಗುರುತಿಸಿ ನಿರ್ವಹಿಸುವ ನಾಯಕರ/ಯೋಜಕರ ಕೊರತೆ ಮಾತ್ರ ಎಲ್ಲೆಡೆ ಇದೆ. ಸಾಮಾನ್ಯವಾಗಿ ಉತ್ತಮ ನಾಯಕತ್ವದ ತಳಹದಿ ಇಂತಹ ಗುಣಗ್ರಾಹಿತ್ವದಿಂದ ಪ್ರಬಲವಾಗಿರುತ್ತದೆ.

ಶ್ರೇಷ್ಠ ಚಿಂತಕ ಮತ್ತು ಪ್ರಬಂಧನಪಟು ಎಮರ್ಸನ್ ಹೇಳಿದ ಮಾತಿದು, 'ಇಷ್ಟರ ತನಕ ಸಸ್ಯವೆಂದು ಗುರುತಿಸಲ್ಪಡದ ಕಾರಣ ಇದು ಕಳೆ ಎಂಬ ಹಣೆಪಟ್ಟಿಯನ್ನು ಅಂಟಿಸಿಕೊಂಡಿದೆ, ಬಿಸಿಲು ಆ ರಸ ವೈಭವವನ್ನು ಪಕ್ವಗೊಳಿಸಿ ಪ್ರಕಟಿಸು ವಂತೆ, ಉತ್ತಮ ನಾಯಕ ತನ್ನ ಪರಿಸರದಲ್ಲಿ ಮೊದಲ್ಗೊಂಡು ಎಲ್ಲೆಡೆ ಪ್ರತಿಭೆಗಳನ್ನು ಗುರುತಿಸಿ ಅವನ್ನು ಬೆಳೆಯಗೊಡುತ್ತಾನೆ. ಹಳ್ಳಿಯಿಂದ ದಿಲ್ಲಿಯ ತನಕ ನಾಯಕತ್ವದ ಹಲವಾರು ಮಾದರಿಗಳನ್ನು ಕಾಣುತ್ತಿರುತ್ತೇವೆ. ಕ್ಷೇತ್ರ ಯಾವುದೇ ಇರಲಿ ಸರಕಾರಿ, ಸಹಕಾರಿ, ವ್ಯಾವಸಾಯಿಕ, ಸಾಮಾಜಿಕ, ಸಾಂಸ್ಕತಿಕ ನಾಯಕನೊಬ್ಬ ಸ–ರಿ– ಗ–ಮ–ಪ–ದ–ನಿ–ಸ ವೆಂಬ ಎಂಟಕ್ಷರಗಳಿಂದ ಹುಟ್ಟಿಕೊಂಡ ಶಬ್ದ ಮಾದರಿಗಳನ್ನು ಆಚರಣೆಗೆ ತಂದದ್ದೇ ಆದರೆ ಅಂತಹ ಅನುಷ್ಠಾನ ಜನ–ಮನ–ಧನದ ಸರ್ವತೋಮುಖ ಬೆಳವಣಿಗೆಗೆ ಮೊದಲ ಕಾರಣವಾಗುತ್ತದೆ.

**ಸದವಕಾಶ:** ಅವಕಾಶ ಸಿಕ್ಕಾಗ ಯಾರೂ ಅಸಮರ್ಥರಲ್ಲ. ಇದರರ್ಥ ಅವಕಾಶಗಳನ್ನು ಎಲ್ಲರೂ ಬಳಸುತ್ತಾರೆಂದಲ್ಲ. ಉತ್ತಮ ನಾಯಕ ತನ್ನ ಹಿಂಬಾಲಕರ ಮುಂದೆಯೂ ನಡೆಯುವುದಿಲ್ಲ. ಹಿಂದೆಯೂ ನಡೆಯುವುದಿಲ್ಲ? ಅವರ ಪಕ್ಕದಲ್ಲಿ ಜೊತೆಜೊತೆಗೆ ನಡೆದಾಗ ಅನುಸರಣೆ, ಅನುಕರಣೆ ಆಟದಂತೆ ಪ್ರಿಯವಾಗುತ್ತದೆ.

**ರೀತಿಗಳು:** ಪ್ರತಿಯೊಂದು ಸಂಸ್ಥೆ/ವ್ಯವಸ್ಥೆಗಳ ರೀತಿ ರಿವಾಜುಗಳು ಕೇವಲ ಕಟ್ಟುಪಾಡುಗಳಲ್ಲ. ಇವೆಲ್ಲ ಇದೇ ಬೆಳವಣಿಗೆಯ, ಸೇವಾವಿತರಣೆಯ ಧ್ಯೇಯ ವಾಕ್ಯಗಳು. ನೌಕರರು/ಸೇವಾ ವಿತರಕರು ತಮ್ಮದೇ ಸಂಸ್ಥೆಯ ರೀತಿ ನೀತಿಗಳನ್ನು ಶಕ್ತಗೊಳಿಸಿಕೊಳ್ಳದೆ ವ್ಯವಹರಿಸಲು ಕಾರಣ ಮುಖ್ಯವಾಗಿ ಎರಡು. ಮೊದಲನೆಯದ್ದು ಪ್ರಾರಂಭಿಕ ಜಲ ದಿನಗಳಲ್ಲಿ ಅವರಲ್ಲಿ ಸಂಸ್ಥೆಯ ಚರಿತೆ ಕುರಿತು ಆಸೆ, ಆಸಕ್ತಿ ಮೂಡಿಸದಿದ್ದದ್ದು ಮತ್ತು ಎರಡನೆಯದಾಗಿ ಅಂತಹ ನೌಕರರಲ್ಲಿ ಹೆಚ್ಚಾಗಿ ಪ್ರಕಟವಾಗುವ ಕೃತಜ್ಞತಾ ನಡವಳಿಕ ಮನೋಭಾವ (Attitude of ingratitude), ಉತ್ತಮ ನಾಯಕ ಇಂತಹ ಸಾಧ್ಯತೆಗಳನ್ನು ಗಮನಿಸಿ ತನ್ನ ಪರಿಸರದಲ್ಲಿ ಹಾಗಾಗದಂತೆ ಎಚ್ಚರ ವಹಿಸುತ್ತಾನೆ. ರೀತಿಗಳನ್ನು, ಶಿಸ್ತು ಸಂಹಿತೆಯನ್ನು ಪ್ರೇರಣೆ ಮತ್ತು ಸಂವೇದನಾತ್ಮಕವಾಗಿ ಹೇಳುವ ಉದ್ಬೋಧಕ ಉತ್ತಮ ನಾಯಕನೆನ್ನಿಸಿಕೊಳ್ಳುತ್ತಾನೆ.

**ಗಮನ:** ನಾಯಕ ತನ್ನ ಸಹಚರರ ಬೆಳವಣಿಗೆ ಮತ್ತು ನಡವಳಿಕೆಗಳನ್ನು ಗಮನಿಸಬೇಕು. ಪಾರ್ಕಿನಲ್ಲಿ ತಂದೆ ತಾಯಿಯ ಪ್ರೀತಿ – ಎಚ್ಚರಿಕೆಯ ಗಮನದಲ್ಲಿ ಮಕ್ಕಳು ನಿರ್ಭಿಡೆಯಿಂದ ಆಡಿಕೊಳ್ಳುವಂತೆ, ನಾಯಕರ ಗಹನ ಗಮನದಲ್ಲಿ ಉಳಿದವರೆಲ್ಲ ಬೆಳೆಯಬೇಕು. ಮುಂಗೋಪಿ ಇನ್ನು ಮೂಗಿನ ನೇರಕ್ಕಷ್ಟೇ ವ್ಯವಹರಿಸುವ ನಾಯಕನಡಿ ಹಿಂಬಾಲಕರು ಸಹಚರರು ಕರಗುತ್ತಾರೆ ಇಲ್ಲ, ಕಮರುತ್ತಾರೆ. ಸಹೃದಯಿ ನಾಯಕ ಇಂತಹ ಸೂಕ್ಷ್ಮ ಸಂವೇದನೆಗಳಿಗೆ ಸ್ಪಂದಿಸಬೇಕಾಗುತ್ತದೆ.

**ಮಾಹಿತಿ:** ಇದು ಮಾಹಿತಿ ಪ್ರಪಂಚವಿದ್ದಿರಬಹುದು. ಆದರೆ ಸ್ವಲ್ಪವಾದರೂ ತಮ್ಮದಾಗಿಸಿಕೊಳ್ಳುವವರೆಷ್ಟು? ದಿನಪತ್ರಿಕೆಗಳು ಅದೆಷ್ಟು ಸುದ್ದಿ ಸಂಗ್ರಹ, ಲೇಖನ ಮಾಲೆಗಳನ್ನು, ಸೂಕ್ತಿ ಸಿಂಚನಗಳನ್ನು ತಂದರೆ ಅದನ್ನು ಶೇಖರಿಸಿ, ಆದರಿಸಿ ಓದುವವರು ಬಲು ಕಡಿಮೆ. ಅಗತ್ಯ ಜೀವರಕ್ಷಕ ಮಾಹಿತಿಗಳನ್ನು ಕೇಳಿ ನೋಡಿ. ಅನೇಕರಿಗೆ ಗೊತ್ತಿರುವುದಿಲ್ಲ, ಮತ್ತನೇಕರು ಮರೆತಿರುತ್ತಾರೆ. ನೌಕರರ ಮಾಹಿತಿ ಮಟ್ಟ ಖಂಡಿತಾ ಉತ್ತಮದ್ದಾಗಿರುತ್ತದೆ.

**ಪದಗಳು:** ಸುತ್ತಮುತ್ತ ಕೆಲಸ ಮಾಡುವವರ 'ಪದಗಳನ್ನು' (ಸಂವಹನ) ನಾಯಕ ಗಮನಿಸಿ ಸೂಕ್ತ ಸಲಹೆಗಳನ್ನು ಸಮಯೋಚಿತವಾಗಿ ಕೊಡುತ್ತಿರಬೇಕು. ಮಾತುಗಳು ಮಂತ್ರದಂತೆ, ಸುಸ್ವರಗೊಂಡಾಗ ವಾತಾವರಣವನ್ನೇ ಬದಲಿಸುತ್ತವೆ.

**ದಂಡ:** ದಂಡವನ್ನು ಶಿಕ್ಷೆ ಎಂದು ತಿಳಿಯಲಾಗದು. ನಾಯಕ ಅಗತ್ಯವೆನಿಸಿದಾಗ ತನ್ನ ನಿಲುವನ್ನು ಸ್ಪಷ್ಟವಾಗಿ

ಪ್ರಕಟಿಸಬೇಕು. ಹಿಂಬಾಲಕರ ಅಸಡ್ಡೆ, ಅನುಚಿತ ವರ್ತನೆಗಳನ್ನು ಬಲವಾಗಿ ಖಂಡಿಸಿ ಋಜು ಮಾರ್ಗಕ್ಕೆ ಎಳೆಯಬೇಕಾಗುತ್ತದೆ. 'ದಂಡಂ ದಶಗುಣಂ ಭವೇತ್' ಎನ್ನುವಂತೆ ಒಂದಲ್ಲ, ಹತ್ತರಷ್ಟು ನಿರ್ಹಹಣೆ ದಂಡದ ಮೂಲಕ (ಪ್ರಯೋಗ ಬೇಕಿಲ್ಲ) ಸಾಧ್ಯವಾಗುತ್ತದಂತೆ. ಹಳ್ಳಿಗಾದೆಯೊಂದು ಇಲ್ಲಿ ಸರಿ ಕಂಡೀತು. 'ಹೊಡೆಯಲೇಬೇಕಾದರೆ ಹೊಡೆ, ಹೊಟ್ಟೆಯ ಮೇಲಲ್ಲ, ಬೆನ್ನಿಗೆ.

**ನೀಡಿಕೆ:** ಇಲ್ಲಿ ಸಹಚರರ ನೀಡಿಕೆಯೆಂದರೆ ನಿರ್ವಹಣೆ ಮತ್ತು ನಿಯತ್ತು, ನಾಯಕ ತನ್ನ ನಿರ್ವಹಣೆಯ ಜೊತೆಗೆ ತನ್ನ ವಲಯದವರ ನೀಡಿಕೆಯತ್ತ ನಿರ್ದಾಕ್ಷಿಣ್ಯವಾಗಿರಬೇಕು. ಇಲ್ಲಿ ರಾಜಿ ಇರಲೇಬಾರದು.

**ಸದಭಿರುಚಿ:** ನಾಯಕ ತನ್ನ ಅನುಯಾಯಿಗಳ ಉತ್ಸಾಹ ಮಟ್ಟವನ್ನು ಕಾಪಿಡಬೇಕು. ನಗುವಿನಿಂದ ವಾತಾವರಣ ನಲಿಯುವಂತೆ, ನೌಕರರು ತಮ್ಮ ವೃತ್ತಿಯ ಜೊತೆ ಜೊತೆಗೆ ಉತ್ತಮ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

ನಾಯಕ ಅಂತಹ ಉತ್ಸಾಹಿಗಳನ್ನು ಪೋಷಿಸಿ ಬೆಳೆಸಬೇಕು. ಸಂಗೀತ ಪ್ರಪಂಚದ ಮೂಲಾಧಾರ ಅಕ್ಷರಗಳಿಂದ ಉತ್ಪನ್ನವಾಗುವ ಮೇಲಿನ ಎಂಟು ದಿಕ್ಕುಗಳಲ್ಲಿ ಉತ್ತಮ ನಾಯಕತ್ವ ಹುಟ್ಟಿಕೊಳ್ಳುವಂತಾಗಲಿ.

**–ಡಾ. ನಾಗರಮಠ ಜಯರಾಮ ಶೆಟ್ಟಿ**

## ದೊಡ್ಡ ಪತ್ರೆ ಎಲೆಯ ಚಟ್ನಿ

ಏನೇನು ಬೇಕು?

ದೊಡ್ಡಪತ್ರೆ ಎಲೆಗಳು – 15 ರಿಂದ 20 ತೆಂಗಿನ ತುರಿ – 1 ಕಪ್/ ಹಸಿಮೆಣಸಿನಕಾಯಿ – 3ರಿಂದ 4 ಪುಟಾಣಿ–1 ರಿಂದ 2 ಚಮಚ ಬೆಳ್ಳುಳ್ಳಿ ಎಸಳು–6 ರಿಂದ 7. ಕಾಳುಮೆಣಸು–2 ರಿಂದ 3 ರುಚಿ ತಕ್ಕಷ್ಟು ಉಪ್ಪು

ಮಾಡೋದು ಹೇಗೆ?

ಬಾಣಲೆಗೆ ಎಣ್ಣೆ ಹಾಕದೇ ದೊಡ್ಡಪತ್ರೆ ಎಲೆಗಳನ್ನು ಹಾಕಿ ಹಸಿವಾಸನೆ ಹೋಗುವಷ್ಟು ಹುರಿಯಿರಿ. ಆರಿಸಿ, ತೆಂಗಿನತುರಿ ಹಾಕಿ. ತಣ್ಣಗಾದಾಗ ಹಸಿಮೆಣಸು, ಬೆಳ್ಳುಳ್ಳಿ, ಕಾಳುಮೆಣಸು, ಪುಟಾಣಿ, ಉಪ್ಪು ಹಾಕಿ ರುಬ್ಬಿ ಕೊಳ್ಳಿ. ದೋಸೆಗೆ, ಚಪಾತಿ, ಅನ್ನದೊಂದಿಗೆ ಈ ಚಟ್ನಿ ಬಹಳ ರುಚಿ. ದೊಡ್ಡಪತ್ರೆ ಎಲೆ ಸೇವಿಸುವುದರಿಂದ ಕಫ–ಕೆಮ್ಮಿನ ತೊಂದರೆಗಳು ನಿವಾರಣೆಯಾಗುತ್ತವೆ.

## ಚಕ್ರಮುನಿ ಸೊಪ್ಪಿನ ಚಟ್ನಿ

ಏನೇನು ಬೇಕು?

ಚಕ್ರಮುನಿ ಸೊಪ್ಪು– 2 ಕಪ್ ತೆಂಗಿನತುರಿ – 1 ಕಪ್ ಬ್ಯಾಡಗಿ ಮೆಣಸಿನಕಾಯಿ– 2 ಹಸಿಮೆಣಸಿನಕಾಯಿ– 1 ಜೀರಿಗೆ– ಅರ್ಧ ಚಮಚ, ಮೆಂತೆ – ಅರ್ಧ ಚಮಚ ಬೆಳ್ಳುಳ್ಳಿ ಎಸಳು– 2 ಹುಣಿಸೇಹಣ್ಣು ಸ್ವಲ್ಪ, ಚಿಟಿಕೆ ಸಕ್ಕರೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು

ಮಾಡೋದು ಹೇಗೆ?

ಬಾಣಲೆಯಲ್ಲಿ ಎರಡು ಚಮಚ ಎಣ್ಣೆ ಹಾಕಿ ಕಾದಾಗ ಜೀರಿಗೆ, ಮೆಂತೆ ಹಾಕಿ ಹುರಿಯಿರಿ. ಅದಕ್ಕೆ ಒಣಮೆಣಸು–ಹಸಿಮೆಣಸು ಮತ್ತು ತೊಳೆದ ಸೊಪ್ಪನ್ನು ಹಾಕಿ ಹುರಿಯಿರಿ. ತೆಂಗಿನ ತುರಿ, ಉಪ್ಪು ಸಕ್ಕರೆ ಹುಣಿಸೇಹಣ್ಣು ಬೆಳ್ಳುಳ್ಳಿಯೊಂದಿಗೆ ನುಣ್ಣಗೆ ರುಬ್ಬಿಕೊಳ್ಳಿ. ಒಗ್ಗರಣೆ ಹಾಕಿ.

## ಟೊಮ್ಯಾಟೊ ಚಟ್ನಿ



ಏನೇನು ಬೇಕು?

ಟೊಮ್ಯಾಟೋ– 2 ರಿಂದ 3 ಈರುಳ್ಳಿ – 1/ ಬೆಳ್ಳುಳ್ಳಿ ಎಸಳು 4 ರಿಂದ 5 ಹಸಿ ಶುಂಠಿ ಸ್ವಲ್ಪ, ಕರಿಬೇವು– ಅರ್ಧ ಕಪ್ ತೆಂಗಿನ ತುರಿ – 1 ಕಪ್ / ಕೊತ್ತಂಬರಿಸೊಪ್ಪು ಸ್ವಲ್ಪ ರುಚಿಗೆ ಉಪ್ಪು ಮತ್ತು ಸ್ವಲ್ಪ ಬೆಲ್ಲ

ಮಾಡೋದು ಹೇಗೆ?

ಬಾಣಲೆಗೆ ಎರಡರಿಂದ ಮೂರೂ ಚಮಚ ಎಣ್ಣೆ ಹಾಕಿ ಕಾದಾಗ ಹೆಚ್ಚಿದ ಟೊಮ್ಯಾಟೊ, ಈರುಳ್ಳಿ, ಹಸಿಮೆಣಸು, ಬೆಳ್ಳುಳ್ಳಿ, ಶುಂಟಿ ಹಾಕಿ ಹುರಿದುಕೊಳ್ಳಿ. ಆರಿಸಿ, ತೆಂಗಿನತುರಿ ಕರಿಬೇವು ಹಾಗು ಕೊತ್ತಂಬರಿಸೊಪ್ಪು ಹಾಕಿ ಬಾಡಿಸಿ. ತಣ್ಣಗಾದಾಗ ಉಪ್ಪು, ಬೆಲ್ಲ ಸೇರಿಸಿ ರುಬ್ಬಿಕೊಳ್ಳಿ. ವಿಶಿಷ್ಟ ರುಚಿಯ ಈ ಚಟ್ನಿ ದೋಸೆ, ಚಪಾತಿ ಮತ್ತು ಅನ್ನದೊಂದಿಗೆ ಕಲಸಿ ತಿನ್ನಲು ಉತ್ತಮವಾದದ್ದು.

# ಕೇರಳ ಪ್ರವಾಸಿಗರ ಆಕರ್ಷಣೆಯ ತಾಣ



ಕೇರಳದ ಹಿನ್ನೀರು ಮತ್ತು ಕಡಲತೀರ ಅತ್ಯಧಿಕ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಗಿರಿಧಾಮಗಳು, ಹಿನ್ನೀರುಗಳು, ಹಳ್ಳಿಗಳು, ಕುಟುಂಬ ಮತ್ತು ಆಪ್ತರ ಜೊತೆಗೂಡಿ ಕಾಲ ಕಳೆಯುವುದಕ್ಕಾಗಿ ಚೇತೋಹಾರಿ ತಾಣಗಳಿವೆ.

ಅಂಥ ಸುಂದರ ತಾಣಗಳ ಸಂಕ್ಷಿಪ್ತ ಮಾಹಿತಿಗಳು ಇಲ್ಲಿವೆ.

**ಮುನ್ನಾರ್:** ಕೇರಳದ ಗಿರಿಧಾಮಗಳ ನಡುವೆ ಬಹು ಜನಪ್ರಿಯವಾದ ಹೆಸರೇ ಮುನ್ನಾರ್‌ನದ್ದು. 1870ರ ಆಸುಪಾಸಿನಲ್ಲಿ ಜಾನ್ ಡೇನಿಯಲ್ ಮನ್ರೋ ಅವರು ಮುನ್ನಾರ್ ಅನ್ನು ಸಂದರ್ಶಿಸಿದ ಬಳಿಕ, ಹೊರಜಗತ್ತಿಗೆ ಮುನ್ನಾರ್‌ನ ಪರಿಚಯವಾಯಿತು. ಇಲ್ಲಿನ ಬೆಟ್ಟಗಳ ಇಳಿಜಾರುಗಳು ಮತ್ತು ಜೋಡಣೆಗಳು ಅದೆಷ್ಟು ವ್ಯವಸ್ಥಿತವಾಗಿ ಹೊಂದಾಣಿಕೆಯಾಗಿವೆ ಎಂದರೆ, ಮುನ್ನಾರ್‌ನ ಬೆಟ್ಟ ಪ್ರದೇಶಗಳು, ಚಹಾ ತೋಟಗಳಿಗೆ ಹೇಳಿ ಮಾಡಿಸಿದಂತಿವೆ. ಎಂಭತ್ತು ಸಾವಿರ ಮೈಲಿಗಳಿಗೂ ಅಧಿಕ ವಿಸ್ತಾರದಲ್ಲಿರುವ ಚಹಾ ತೋಟಗಳು ಹಾಗೂ ಅಷ್ಟೇ ವಿಸ್ತಾರದಲ್ಲಿ ಬೆಳೆಸಲಾಗಿರುವ ಸುಗಂಧ ಭರಿತ ಬೆಳೆಗಳು, ಮಂಜು ಕವಿದ ಕಣಿವೆಗಳು ಮತ್ತು ಕೈಗೆಟುಕುತ್ತವೆಯೇನೋ ಎಂಬಂತೆ ಅತೀ ಕೆಳಮಟ್ಟದಲ್ಲಿರುವ ಮೋಡಗಳು! ಇವೆಲ್ಲವೂ ಜೊತೆಗೂಡಿ ಮುನ್ನಾರ್ ಅನ್ನು ನಿಜಕ್ಕೂ ಸುಂದರ ತಾಣವಾಗಿಸಿವೆ.

**ವಯನಾಡ್:** ಕೇರಳ ರಾಜ್ಯದ ಅತ್ಯಂತ ಹಚ್ಚ ಹಸುರಿನ ಸಂದರ್ಶನೀಯ ಸ್ಥಳಗಳ ಪೈಕಿ ವಯನಾಡ್ ಕೂಡಾ ಒಂದಾಗಿದೆ. ಪ್ರಾಕೃತಿಕ ಸೌಂದರ್ಯ , ಪ್ರಶಾಂತ ವಾತಾವರಣ ಮತ್ತು ಸಂಸ್ಕೃತಿಯಿಂದ ವಯನಾಡ್ ಸಂಪನ್ನವಾಗಿದೆ. ನಿಸರ್ಗ ಮತ್ತು ಮಾನವ ನಿರ್ಮಿತ ಪರಂಪರೆಗಳ ಪರಿಪೂರ್ಣ ಮಿಶ್ರಣವಾಗಿರುವ ಈ ಸ್ಥಳವು ತನ್ನ ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಬುಡಕಟ್ಟು ಪರಂಪರೆಗೆ ಹೆಸರುವಾಸಿಯಾಗಿದೆ. ಹೆಸರಿಲ್ಲದ ಅನೇಕ ಜಲಪಾತಗಳು ವಯನಾಡ್ ಸುತ್ತ ಕಂಡುಬರುತ್ತವೆ.

**ಕೋವಳಂ :** ಹೊಸ ವರ್ಷದ ಸಂಭ್ರಮಾಚರಣೆಗಳಿಗೂ ಹೆಸರುವಾಸಿಯಾಗಿರುವ ಕೇರಳದ ಅತ್ಯುತ್ತಮ ಕಡಲ ಕಿನಾರೆಗಳ ಪೈಕಿ ಒಂದೆನಿಸಿಕೊಂಡಿರುವ ಕೋವಳಂ, ಅರ್ಧಚಂದ್ರಾಕೃತಿಯ ಕಡಲಕಿನಾರೆಯಾಗಿದೆ. ಸದಾ ಚಟುವಟಿಕೆಗಳಿಂದ ಈ ಸ್ಥಳ ಕ್ರಿಯಾಶೀಲವಾಗಿದೆ. ಜಲ ಕ್ರೀಡೆಗಳಿಗಾಗಿ, ಸೌರ ಸ್ನಾನಕ್ಕಾಗಿ ಆಯುರ್ವೇದ ಚಿಕಿತ್ಸೆಗಳಿಗಾಗಿ ಅಥವಾ ಹಾಗೆಯೇ ಸುಮ್ಮನೇ ಸಮುದ್ರದ ಅಲೆಗಳನ್ನು ಎಣಿಸುತ್ತಾ ಕಡಲ ಕಿನಾರೆಯಲ್ಲಿ ಹಾಯಾಗಿ ಕಾಲಕಳೆಯುವ ನಿಟ್ಟಿನಲ್ಲಿ ಇದೊಂದು ಅದ್ಭುತ ತಾಣ.

**ಅಪ್ಪಿ:** ಪೂರ್ವದ ವೆನಿಸ್ ಎಂದೇ ಅಕ್ಕರೆಯಿಂದ ಕರೆಯಲ್ಪಡುವ ಅಪ್ಪಿಯು ತನ್ನ ಸಂದರ್ಶಕರನ್ನು ಎಂದೆಂದಿಗೂ ನಿರಾಸೆಗೊಳಿಸದ ಅತ್ಯುತ್ತಮ ಸ್ಥಳಗಳ ಪೈಕಿ ಒಂದು. ಹಿನ್ನೀರು, ದೋಣಿಮನೆಗಳು ಮತ್ತು ವಿವಿಧ ರೂಪಗಳಲ್ಲಿರುವ ಪ್ರಾಕೃತಿಕ ಸೌಂದರ್ಯಗಳೊಂದಿಗೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ರಾಜ್ಯದ ಈ ಭಾಗದತ್ತ ಆಕರ್ಷಿಸುತ್ತಿದೆ. ಭತ್ತದ ಗದ್ದೆಗಳು, ಪ್ರಶಾಂತವಾದ ಚಾಪಲ್‌ಗಳು, ಪ್ರಾಚೀನ ದೇವಸ್ಥಾನಗಳು, ಮೀನುಗಾರಿಕಾ ಗ್ರಾಮಗಳು ಹಾಗೂ ಇನ್ನಿತರ ಅನೇಕ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ.

**ಇಡುಕ್ಕಿ:** ಒಂದೆಡೆ ಕುಳಿತುಕೊಂಡು, ಹಾಯಾಗಿ ಕಾಲ ಕಳೆಯುತ್ತಾ, ಮೈಮನಗಳನ್ನು ನಿರಾಳವಾಗಿಸಿಕೊಳ್ಳುವುದು ನಿಮ್ಮ ಆದ್ಯತೆಯಾಗಿದ್ದಲ್ಲಿ, ಇಡುಕ್ಕಿಯು ನಿಮ್ಮಂಥವರಿಗೆಂದೇ ಹೇಳಿಮಾಡಿಸಿದ ತಾಣ. ಜೀವಕಳೆಯಿಂದ ತುಂಬಿಕೊಂಡಿರುವ ಬೆಟ್ಟಗಳು ಮತ್ತು ಸಮೃದ್ಧ ಕಾನನಗಳ ನಡುವೆ ಇರುವ ಈ ಸುಂದರ ಸ್ಥಳವು, ತನ್ನ ಶೋಭೆ ಮತ್ತು ಆಕರ್ಷಣೆಗಳೊಂದಿಗೆ ಕುತೂಹಲಿ ಪ್ರವಾಸಿಗರನ್ನು, ಪ್ರಕೃತಿಪ್ರೇಮಿಗಳನ್ನು ಹಾಗೂ ಛಾಯಾಚಿತ್ರಗ್ರಾಹಕರನ್ನು ಸಮಾನವಾಗಿಯೇ ಕೈಬೀಸಿ ಕರೆಯುತ್ತಿದೆ. ಸುಗಂಧಭರಿತ ಚಹಾ ಮತ್ತು ಸಾಂಬಾರ ಪದಾರ್ಥಗಳ ತೋಟಗಳಿಂದ ಸುತ್ತುವರೆಯಲ್ಪಟ್ಟಿರುವ ಇಡುಕ್ತಿಯು ಚಾರಣಗಳಿಗೆ, ಪ್ರಕೃತಿ ನಡಿಗೆಗಳನ್ನು ಕೈಗೊಳ್ಳುವುದಕ್ಕೆ ಹಾಗೂ ಪಕ್ಷಿವೀಕ್ಷಣೆಯಂತಹ ಚಟುವಟಿಕೆಗಳಿಗೆ ಹೆಸರುವಾಸಿ.

**ವರ್ಕಳ:** ವರ್ಕಳವು ಕೇವಲ ತನ್ನ ಕಡಲ ಕಿನಾರೆಗಳಿಗಷ್ಟೇ ಅಲ್ಲದೇ, ಪ್ರಾಚೀನ ಜನಾರ್ದನ ಸ್ವಾಮಿ ದೇವಸ್ಥಾನಕ್ಕೂ ಅಷ್ಟೇ ಪ್ರಸಿದ್ಧವಾಗಿದೆ. ಒಂದು ಪಾರ್ಶ್ವದಲ್ಲಿ ದಿನ್ನೆಗಳಿಂದ ಹಾಗೂ ಮತ್ತೊಂದು ಪಾರ್ಶ್ವದಲ್ಲಿ ಸಮೃದ್ಧ ಹಚ್ಚಹಸುರಿನಿಂದ ಒಡಗೂಡಿರುವ ಇಲ್ಲಿನ ಮನಸೂರೆಗೊಳ್ಳುವ ಕರಾವಳಿ ತೀರವು ದೊಡ್ಡ



ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ದೋಣಿ ವಿಹಾರಗಳು, ಸರ್ಫಿಂಗ್, ಪ್ಯಾರಾಸೈಲಿಂಗ್ ಹಾಗೂ ಕುದುರೆ ಸವಾರಿಯಂತಹ ಚಟುವಟಿಕೆಗಳಿಗೂ ವರ್ಕಳ ಪ್ರಸಿದ್ಧಿ ಹೊಂದಿದೆ. ಸೂರ್ಯಾಸ್ತಮಾನದ ವೇಳೆಯಲ್ಲಿ ಸಾಟಿಯಿಲ್ಲದ ಇಲ್ಲಿನ ಪರಿಸರದ ಸೌಂದರ್ಯವನ್ನು ಸವಿಯಲು ವರ್ಕಳಕ್ಕೆ ದೊಡ್ಡ ಸಖ್ಯೆಯಲ್ಲಿ ಪ್ರವಾಸಿಗರು ಬಂದು ಸೇರುತ್ತಾರೆ,

**ಕಾಸರಗೋಡು:** ಸುಪ್ರಸಿದ್ದ ಬೇಕಲ್ ಕೋಟೆ ಮತ್ತು ಅನಂತಪುರ ಸರೋವರ ದೇವಸ್ಥಾನದ ತವರೂರಾಗಿರುವ ಕಾಸರಗೋಡು, ಒಂದು ಪಾರ್ಶ್ವದಲ್ಲಿರುವ ಪಶ್ಚಿಮ ಘಟ್ಟಗಳ ಹಾಗೂ ಮತ್ತೊಂದು ಪಾರ್ಶ್ವದಲ್ಲಿರುವ ಅರಬ್ಬಿ ಸಮುದ್ರದ ನಡುವೆ ಸಿಲುಕಿಕೊಂಡಂತಿದೆ. ಜಾರಿ ಬಿದ್ದಂತಿರುವ ಬೆಟ್ಟಗಳು, ಸಮೃದ್ಧ ಹಸುರಿನ ಕಲ್ಪವೃಕ್ಷಗಳು, ಹದವಾಗಿ ಬೀಸುವ ಸಾಗರ ಮಾರುತ ಹಾಗೂ ಪಾರಂಪರಿಕ ದೇವಸ್ಥಾನಗಳು ಮತ್ತು ಸ್ಮಾರಕಗಳ ಅಗಾಧ ಸಂಖ್ಯೆಯು ರಜಾ ಅವಧಿಯನ್ನು ಪ್ರಶಾಂತವಾಗಿ ಕಳೆಯ ಬಯಸುವ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಮುಂಗಾರು ಮಳೆಯ ಅರ್ಭಟದ ನಡುವೆಯೇ ಕೇರಳವನ್ನು ಸುತ್ತುವುದು ಇನ್ನಷ್ಟು ಮುದ ನೀಡುವ ಸಂಗತಿ.

**ತಲುಪುವ ಮಾರ್ಗ:** ದೇಶದ ಪ್ರಮುಖ ನಗರಗಳಿಂದ ಕೇರಳಕ್ಕೆ ಸಾಕಷ್ಟು ಬಸ್, ರೈಲು ಹಾಗೂ ವಿಮಾನ ಸಂಪರ್ಕಗಳಿವೆ. ಅಲ್ಲಿಂದ ಪ್ರವಾಸಿಗರಿಗೋಸ್ಕರವೇ ಸಾಕಷ್ಟು ಸಾರಿಗೆ ಬಸ್‌ಗಳ ವ್ಯವಸ್ಥೆಯಿದೆ. ನಿಮಗೆ ಬೇಕಾದ ಕಡಲ ಕಿನಾರೆಗಳಿವೆ ಬಸ್ ಅಥವಾ ಕ್ಯಾಬ್‌ಗಳ ಮೂಲಕ ಪ್ರಯಾಣಿಸಬಹುದು,

# ಅಗಾಧ ಪ್ರಮಾಣದ ಮಳೆನೀರು ಸಂಗ್ರಹ: ಮಾದರಿಯಾದ ಜೋಸೆಫ್





ಅವರು ಪದವಿ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು. ಆದರೆ ಅವರ ಆಸಕ್ತಿಯ ವಿಷಯ ನೀರಿನ ಉಳಿತಾಯ. ಜಲ ಸಂಪನ್ಮೂಲ ಉಳಿತಾಯದ ವಿಷಯದಲ್ಲಿ ದೇಶದ ಬಹು ಭಾಗಗಳಲ್ಲಿ ಅಧ್ಯಯನ ಮಾಡಿದವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇದೇ ವಿಷಯವಾಗಿ ಡಾಕ್ಟರೇಟ್ ಪದವಿ ಗಳಿಸಿದವರು. ಅವರ ಮನೆಯಲ್ಲಿಯೇ ಮಳೆನೀರಿನ ಸಂಗ್ರಹವನ್ನು ಅಗಾಧ ಪ್ರಮಾಣದಲ್ಲಿ ಮಾಡುತ್ತಿರುವವರು.

ಅವರ ಹೆಸರು ಪ್ರೊ. ಎಂ.ಎನ್. ಜೋಸೆಫ್. ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನಲ್ಲಿರುವ ಸೇಕ್ರೆಡ್ ಹಾರ್ಟ್ ಪದವಿ ವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಅವರ ತಾರಸಿ ಮನೆಗೆ ನಿರ್ಮಿಸಿದ ಹೊಸ ಛಾವಣಿ ಮಳೆನೀರಿನ ಸಂಗ್ರಹಕ್ಕಾಗಿಯೇ ನಿರ್ಮಾಣವಾಗಿದೆ. ಜೂನ್ ತಿಂಗಳಿನಿಂದ ಆರಂಭಿಸಿ ಮಾರ್ಚ್ ತಿಂಗಳವರೆಗೂ ಇವರ ಮನೆಯಲ್ಲಿ ಕೊಳವೆ ಬಾವಿ, ತೆರೆದ ಬಾವಿಗಳಿಂದ ಹನಿ ನೀರನ್ನೂ ಬಳಸುವುದಿಲ್ಲ, ಮಳೆನೀರಿನ ಸಂಗ್ರಹವೇ ಇವರಿಗೆ ಜೀವನದಾಯಿಯಾಗಿದೆ,

ತಾರಸಿಯ ಮೇಲ್ಭಾಗದಲ್ಲಿ 2400 ಅಡಿಗಳಷ್ಟು ವಿಸ್ತಾರವಿರುವ ಜಾಗಕ್ಕೆ ಅತ್ಯುತ್ತಮ ದರ್ಜೆಯ ಬಾವಿಯ ತಗಡಿನ ಸೀಟು ಹೊದೆಸಿ ಜೋಸೆಫ್ ಒಂದು ಛಾವಣಿ ಮಾಡಿದ್ದಾರೆ. ಇದರ ಮೇಲೆ ಬೀಳುವ ಮಳೆಯ ನೀರೆಲ್ಲವೂ ಒಂದು ಕೊಳವೆಯನ್ನು ಸೇರುತ್ತದೆ. ಕೊಳವೆಯಲ್ಲಿ ಸೇರಿದ ನೀರು

ಪರಿಶುದ್ಧಗೊಳ್ಳಲು ಮೈಕ್ರೋ ಫಿಲ್ಟರ್ ವ್ಯವಸ್ಥೆಯಿದೆ. ಹೀಗೆ ಶುದ್ಧಗೊಂಡ ನೀರು ತಲಪುವುದು ಫೈಬರ್ ನಿರ್ಮಿತವಾದ ಬ್ಯಾರೆಲ್‌ಗಳಿಗೆ. ಇದಕ್ಕಾಗಿಯೇ ಕಂಪನಿಯಲ್ಲಿ ಹನ್ನೊಂದು ಬಿಳಿ ವರ್ಣದ ಬ್ಯಾರೆಲ್‌ಗಳನ್ನು ಅವರು ಮಾಡಿಸಿ ತಂದಿದ್ದಾರೆ. ಪ್ರತೀ ಬ್ಯಾರೆಲ್ ಎರಡು ಸಾವಿರ ಲೀಟರ್ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ಪಡೆದಿದೆ. ನೂರು ವರ್ಷ ಭದ್ರತೆಯಿರುವ ಈ ಬ್ಯಾರೆಲ್‌ಗೆ ಅವರು ಒಂದೊಂದಕ್ಕೆ ಹತ್ತು ಸಾವಿರ ರೂಪಾಯಿ ಬೆಲೆ ಕೊಟ್ಟಿದ್ದಾರೆ. ಜೂನ್ ತಿಂಗಳ ನಾಲ್ಕು ದಿನಗಳ ಧಾರಾ ಕಾರ ಮಳೆಗೆ ಬ್ಯಾರೆಲ್ ಎಲ್ಲವೂ ತುಂಬಿಕೊಳ್ಳುತ್ತವೆ.

ಅನಂತರವೂ ಸಂಗ್ರಹವಾಗುವ ನೀರು ಸಮುದ್ರದೆಡೆಗೆ ಹೋಗಲು ಜೋಸೆಫ್ ಬಿಡುವುದಿಲ್ಲ. ಮನೆಯಂಗಳದ ತಳದಲ್ಲಿ ತೊಟ್ಟಿಯಿರುವ ಸಂಗತಿ ಮೇಲ್ನೋಟಕ್ಕೆ ನಮಗೆ ತನಕ ಕಾಣಿಸುವುದಿಲ್ಲ. ಈ ತೊಟ್ಟಿಯ ತಳ ಮತ್ತು ಗೋಡೆಗಳಿಗೆ ಗ್ರಾನೈಟ್ ಶಿಲೆಯನ್ನು ಮುಚ್ಚಿ ಒಂದು ಸಂದಿಯೂ ಉಳಿಯ ದಂತೆ ಗಾರೆ ಹಚ್ಚಿದ್ದಾರೆ. ಅಲ್ಲಿ 50 ಸಾವಿರ ಲೀಟರ್ ನೀರು ಶೇಖರಣೆಯಾಗುತ್ತದೆ. ಅನಂತರದ ನೀರು 40 ಅಡಿ ಆಳವಿರುವ ತೆರೆದ ಬಾವಿಗೆ ಭರ್ತಿ ಯಾಗುತ್ತದೆ. ಬಳಿಕ ನಿರಂತರವಾಗಿ 360 ಅಡಿ ಆಳವಿರುವ ಕೊಳವೆ ಬಾವಿಯೊಳಗೆ ಹೋಗುತ್ತದೆ. ಹೀಗೆ ಮಳೆ ನೀರು ಒಂದು ಉಳಿತಾಯದ ಪದ್ಧತಿ ಅಳವಡಿಸಿರುವ ಜೋಸೆಫ್ ಇದಕ್ಕಾಗಿ ಸುಮಾರು ಏಳು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ.

ಜೋಸೆಫ್ ಮನೆ ಕಟ್ಟಿಸಿದ್ದು ನೀರಿಲ್ಲದ ಒಣ ನಾಲ್ಕು ಪ್ರದೇಶದಲ್ಲಿ, ಫೆಬ್ರವರಿ ಹೊತ್ತಿಗೇ ಆಸುಪಾಸಿನ ಯಾರ ಬಾವಿಯಲ್ಲೂ ನೀರಿನ ಪಸೆ ಇರುತ್ತಿರಲಿಲ್ಲ. ಮನೆ ಕಟ್ಟಲು ಬೇಕಾದ ನೀರಿಗೂ ಜೋಸೆಫ್ ನೀರು ಕಷ್ಟಪಟ್ಟಿದ್ದರು. ಆದರೆ ಅವರ ಮಳೆನೀರಿನ ಸಂಗ್ರಹ ಆರಂಭವಾದ ಮೇಲೆ ಎಂಥ ಬಿರು ಬೇಸಗೆಯಲ್ಲಿ ಕೂಡ ಒಂದು ಕಿಲೋಮೀಟರ್ ದೂರದ ತನಕ ಇರುವ ಮನೆಗಳ ಯಾರ ಬಾವಿಯೂ ಬರಿದಾಗುವುದಿಲ್ಲ. ಅಲ್ಲಿ ಅಗಾಧ ನೀರಿನ ಸೆಲೆಯುಕ್ಕುತ್ತಿದೆ. ಅವರ ನೀರು ಸಂಗ್ರಹದ ತೊಟ್ಟಿ, ಗಾರೆ ಬ್ಯಾರೆಲ್ ಎಲ್ಲವೂ ಭದ್ರವಾದ ಮುಚ್ಚಳ ಹೊಂದಿವೆ. ಹಾವಸೆ, ಧೂಳು ಒಳಗೆ ಬರುವುದಿಲ್ಲ. ಜಲ ಪರೀಕ್ಷಕ ಮಂಡಳಿಯವರು ಈ ನೀರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಇದು ಅತ್ಯಂತ ಪರಿಶುದ್ಧವಾಗಿದೆ ಎಂದು ದೃಢಪಡಿಸಿದ್ದಾರೆ.

ಮೊದಲ ಮಳೆಯ ನೀರನ್ನು ಜೋಸೆಫ್ ಸಂಗ್ರಹಿಸದೆ ಹಾಗೆಯೇ ಹೊರಗೆ ಬಿಡುತ್ತಾರೆ. ಅನಂತರದ ನೀರು ಸಂಗ್ರಹವಾಗುವುದು ಪರಿಶುದ್ಧ ನೀರಿಗೆ ನೆಲೆಯಾಗಿದೆ. ಮಳೆಗಾಲ ಕಳೆಯುವವರೆಗೆ ಫೈಬರ್ ಬ್ಯಾರೆಲ್‌ಗಳಲ್ಲಿರುವ ನೀರು ಅಡುಗೆ, ಸ್ನಾನ, ಬಟ್ಟೆ ತೊಳೆಯಲು ಒದಗುತ್ತದೆ. ಆವರೆಗೆ ನೀರೆತ್ತಲು ವಿದ್ಯುತ್ ಬೇಡ. ಅದೂ ಉಳಿತಾಯವಾಗುತ್ತದೆ. ಬಳಿಕ ನೆಲದಾಳದ ನೀರನ್ನು ಮೇಲಿರುವ ಬ್ಯಾರೆಲ್ ಸೇರಿಸಲು ಪಂಪ್‌ಸೆಟ್ ಬಳಸಬೇಕಾಗುತ್ತದೆ. ಮಾರ್ಚ್ ತಿಂಗಳಲ್ಲಿ ಧಾರಾಳವಾಗಿ ಮಳೆ ಬಂದರೆ ಬಾವಿಯ ನೀರು ಮುಟ್ಟುವ ಪ್ರಮೇಯವೇ ಬರುವುದಿಲ್ಲ. ಮಳೆನೀರು ಬಳಸಿ ಚಿಕ್ಕು, ಬಾಳೆ, ಬಸಳೆ, ತೊಂಡೆಯಂತಹ ಹಣ್ಣು, ತರಕಾರಿಗಳನ್ನು ಯಥೇಚ್ಛವಾಗಿ ಬೆಳೆಯುವ ಜೋಸೆಫ್ ಓರ್ವ ಕೃಷಿಕನೂ ಹೌದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ನನ್ನ ನೀರಿನ ಸಂಗ್ರಹ ದೊಡ್ಡ ಪ್ರಮಾಣದ್ದು. ಹೀಗಾಗಿ ಖರ್ಚಾದ ಹಣದ ಮೊತ್ತ ದೊಡ್ಡದು. ಆದರೆ ಯಾರೇ ಆದರೂ ಸಣ್ಣ ಪ್ರಮಾಣದಲ್ಲಿ ಮಳೆನೀರು ಸಂಗ್ರಹಿಸಲು ಇಚ್ಛಿಸಿದರೆ ಅವರಿಗೆ ಉಚಿತವಾಗಿ ಮಾರ್ಗದರ್ಶನ ಮಾಡಬಲ್ಲೆ ಎನ್ನುವ ಜೋಸೆಫ್ ಬರದ ಬೇಗೆಯಿಂದ ತತ್ತರಿಸಿರುವ ಪ್ರದೇಶಗಳಲ್ಲಿ ಕೂಡ ಸುಲಭವಾಗಿ ಮಳೆನೀರು ಸಂಗ್ರಹಿಸಿಡುವ ವಿಧಾನಗಳನ್ನು ಅನುಸರಿಸಿ ಭೂಮಿಯ ನೀರಿನ ಆಶ್ರಯವನ್ನು ಕಡಿಮೆ ಮಾಡಲು ಜನ ಮುಂದಾಗಬೇಕಾಗಿದೆ ಎನ್ನುತ್ತಾರೆ.

–ಪ. ರಾಮಕೃಷ್ಣ ಶಾಸ್ತ್ರಿ

## ವಾಹನ ಸವಾರರೇ... ಎಚ್ಚರ...!!!

**ನಿಮ್ಮ ಹಾಗೂ ವಾಹನಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳು ನಿಮ್ಮ ಬಳಿಯಲ್ಲಿಯೇ ಸದಾ ಇರಲಿ. ವಾಹನ ಚಲಿಸುವಾಗ ನಿಯಮಗಳನ್ನು ತಪ್ಪದೇ ಪಾಲಿಸಿ. ಇಲ್ಲವಾದಲ್ಲಿ ದಂಡ ರೂ. 1,000/–ಕ್ಕಿಂತಲೂ ಅಧಿಕವಾಗಿರುತ್ತದೆ. ನಿಮ್ಮ ಜೀವಕ್ಕೆ ವಾಹನ ಸಂಚಾರಿ ನಿಯಮ ಇರುವುದೇ ವಿನಹ–ಪೊಲೀಸರೊಂದಿಗೆ ವಾದಕ್ಕಿಳಿದು ಇಲ್ಲಸಲ್ಲದ ನೆಪವನ್ನು ಹೇಳಬೇಡಿ. ತಪ್ಪು ಮಾಡಿದರೆ ಶಿಕ್ಷೆ ಅನು ಭವಿಸಿ, ಇಲ್ಲ ನಿಯಮ ಪಾಲಿಸಿ ಸಂತೋಷದಿಂದಿರಿ. ದ್ವಿಚಕ್ರ ವಾಹನ ಸವಾರರು ಹಾಗೂ ಹಿಂಬದಿ ಯಲ್ಲಿರುವವರು ತಪ್ಪದೇ ಹೆಲ್ಮೆಟ್ ಧರಿಸಿ**

# ಸ್ವರ್ಗದ ಸುಖ

ಒಮ್ಮೊಮ್ಮೆ ನನಗೆ ಸರ್ವಜ್ಞನ ಮೇಲೆ ಸಿಟ್ಟು ಬಂದು ಬಿಡುತ್ತದೆ. ಸ್ವರ್ಗಕ್ಕೆ ಕಿಚ್ಚು ಹಚ್ಚಬೇಕೆಂದರೆ ಏನೇನಿರಬೇಕು ಎಂದು ಹೇಳುವ ಭರಾಟೆಯಲ್ಲಿ ಏನು ಹೇಳಿದ್ದಾನೆ ಗೊತ್ತೇ? ಮೊದಲನೆಯದು – ಬೆಚ್ಚನೆಯ ಮನೆಯಿರಬೇಕಂತೆ. ಆಯ್ತು, ಸಾಲವೋ ಸೋಲವೋ ಮಾಡಿ. ಮನೆ ಕಟ್ಟಿಸಿದ್ದಾಯ್ತನ್ನಿ. ಎರಡನೆಯದು – ವೆಚ್ಚಕ್ಕೆ ಹೊನ್ನು, ಅದೂ ಇದೆ ಅನ್ನಿ. ಮೂರನೆಯದು – ಇಚ್ಚೆಯನರಿತು ನಡೆವ ಸತಿ! ಇದಕ್ಕೆ ಬಂದುದು ನನಗೆ ಸಿಟ್ಟು! ಎಲ್ಲಿ ಸಿಗುತ್ತಾರೆ ಇಂಥ ಸತಿಯರು ಈ ಕಾಲದಲ್ಲಿ? ಇಚ್ಚೆಯನರಿತು ನಡೆಯುವುದು ದೂರ ಉಳಿಯಿತು, ಇಚ್ಚೆಯನರಿತೇ ಕಾಡುತ್ತಿರುತ್ತಾರೆ! ಹೀಗಾಗಿ ಎಷ್ಟೋ ಪತಿ ಮಹಾಶಯರು ಸ್ವರ್ಗದ ಸುಖದಿಂದ ವಂಚಿತರಾಗಿ ಕುಂಟುತ್ತ ಸಾಗಿದ್ದಾರೆ.

ಹಾಗಾದರೆ ಸ್ವರ್ಗದ ಸುಖವನ್ನು ಹೇಗೆ, ಎಲ್ಲಿ ಹುಡುಕುವುದು? ದೇವರನ್ನೇ ಕೇಳಬೇಕು! ಹೇಗೆ?

ಹಳೆಯ ಜೋಕು ಹೇಳುತ್ತಿದ್ದೇನೆ. ನಿಮಗೆ ಗೊತ್ತಿದ್ದದ್ದೇ. ಆದರೂ ಪರಾಮರ್ಶಿಸಿ ನೋಡಿ. ತಪಸ್ಸಿಗೆ ಕುಳಿತ ಕುರುಡ ಇನ್ನೇನು ತಾನೇ ಕೇಳಿಯಾನು, ಎರಡು ಕಣ್ಣು ಅಂತಂದ್ಕೊಂಡು ಪ್ರತ್ಯಕ್ಷನಾಗಿ 'ಏನು ಬೇಕು ಕೇಳು, ಕೊಡುತ್ತೇನೆ' ಅನ್ನುತ್ತಾನೆ. ಈತ ಕೇಳಿದ್ದು: "ನನ್ನ ಮೊಮ್ಮಗ ಚಿನ್ನದ ಅಂಬಾರಿಯಲ್ಲಿ ಕುಳಿತು ಬರುವುದನ್ನು ನಾನು ಕಾಣಬೇಕು!"

**ಪ್ಯಾಕೇಜ್ ಸಿಸ್ಟಮ್!**

ಮೊಮ್ಮಗ ಹುಟ್ಟಬೇಕಾದರೆ ಮೊದಲು ಇವನಿಗೆ ಮಗ ಹುಟ್ಟಬೇಕು. ಮಗ ಹುಟ್ಟಬೇಕಾದರೆ ಇವನಿಗೆ ಮದುವೆಯಾಗಬೇಕು. ಅಂದರೆ ಇವನನ್ನು ಮೆಚ್ಚಿ ಮದುವೆಯಾಗಲು ಸೂಕ್ತ ಕನ್ಯೆ ಸಿಗಬೇಕು. ಮೊದಲೇ ಕುರುಡ ಈತ, ಕಣ್ಣಿದ್ದರೂ, ಉಳಿದೆಲ್ಲ ಅಂಗಾಂಗಗಳು ಸುಸ್ಥಿತಿಯಲ್ಲಿ ಇದ್ದರೂ ಏನೇನೋ ನೂರಾಎಂಟು ಕಂಡಿಶನ್ನುಗಳನ್ನು ಹಾಕಿಯೇ ಮದುವೆಗೆ ಒಪ್ಪಬಹುದಾದ ಕನ್ಯಾಮಣಿಗಳಿರುವ ಈ ಕಾಲದಲ್ಲಿ ಕುರುಡನನ್ನು ಯಾರಾದರೂ ಮದುವೆಯಾಗಲು ಒಪ್ಪುತ್ತಾರೆಯೇ?

ದೇವರು ದಿಢೀರ್ ಅಂತ ಇವನಿಗೆ ದೃಷ್ಟಿ ಕೊಟ್ಟ. ಶುರುವಾಯ್ತು ಸರಣಿ ಕ್ರಿಯೆ.

ಮದುವೆ ಆಯ್ತು.

ಮಗನೂ ಹುಟ್ಟಿದ ಅನ್ನಿ. ಅವನು ಬೆಳೆದು ದೊಡ್ಡವನಾಗಬೇಕು. ಬೇಬಿ ಸಿಟ್ಟಿಂಗ್‌ಗೆ, ಎಲ್ಕೇಜಿಗೆ ಸೀಟು ದೊರಕಿಸಿಕೊಟ್ಟು, ಪ್ರತಿ ವರ್ಷ ಚೆನ್ನಾಗಿ ಮಾರ್ಕ್ಸ್ ತೆಗೆದು ಕೊಳ್ಳುವಂತೆ ಮಾಡಿ, ಮೆಡಿಕಲ್ಲೋ, ಇಂಜಿನೀಯರಿಂಗ್‌ಗೋ ಸೀಟು? ಕೊಡಿಸಬೇಕು. ಅವನಿಗೂ ಯೋಗ್ಯ ನೌಕರಿ ಸಿಕ್ಕು, ಯೋಗ್ಯ ಕನ್ಯ ಸಿಕ್ಕು ಮದುವೆ ಆಗಿ ಮಗ ಹುಟ್ಟಬೇಕು. ಆತ ಚಿನ್ನದ ಅಂಬಾರಿ ಹತ್ತಬೇಕು. ಸಿಕ್ಕಸಿಕ್ಕವರಿಗೆ ಚಿನ್ನದ ಅಂಬಾರಿ ಹತ್ತಲಿಕ್ಕಾಗ್ತದೆಯೇ? ಆತ ಮಹಾರಾಜ ಆಗಲೇಬೇಕು. ಮಹಾರಾಜ ಅಂದ್ರೆ ಜೊತೆಯಲ್ಲಿ ಮಂತ್ರಿ ಮಹೋದಯರೆಲ್ಲ ಇರಲೇಬೇಕಲ್ಲ? ಇಡೀ ಪರಿವಾರವನ್ನು ದೇವರು ಸೃಷ್ಟಿ ಮಾಡಬೇಕು! ಆ ಅಂಬಾರಿ ನೋಡುವವರೆಗೆ ಎಲ್ಲಿ ಇವನ ಆಯುಷ್ಯವನ್ನು ದೇವರು ವೃದ್ಧಿಸುತ್ತಲೇ ಹೋಗಬೇಕು. ಅಂದರೆ ಆರೋಗ್ಯ ಭಾಗ್ಯವನ್ನೂ ಒದಗಿಸಿ ಕೊಡಲೇಬೇಕು. ಅಬಬಬಬಾ... ದೇವರದು ಫಜೀತಿ! ಎಷ್ಟೆಲ್ಲಾ ಜವಾಬ್ದಾರಿಗಳನ್ನು ಆತ ಹೊರಬೇಕು, ನಿಭಾಯಿಸಬೇಕು ನೋಡಿ. ಅವನು ದೇವರು, ನಿಭಾಯಿಸುತ್ತಾನೆ ಬಿಡಿ, ನಿಭಾಯಿಸಿದ.

ನಾನೂ ಯಾಕೆ ಇಂಥದ್ದೊಂದು ಟ್ರಿಕ್ ಮಾಡಬಾರದು ಅಂತ... ತಪಸ್ಸು ಮಾಡಲು ಕಾಟ್ ಮೇಲೆ ಅಡ್ಡಾದೆ. ಕಣ್ಣು ಮುಚ್ಚುವುದಷ್ಟೇ ತಡ, ದೇವರು ಪ್ರತ್ಯಕ್ಷನಾಗಿ "ನಿನಗಷ್ಟೇ ಅಲ್ಲ, ಯಾರ‍್ಯಾರಿಗೆ ಏನೇನು ಸುಖ ಕೊಡಬೇಕೋ, ಅದನ್ನೆಲ್ಲಾ ಕೊಟ್ಟೆ ಕಳಿಸಿದ್ದೇನೆ. ನೀವು ಹುಡುಕಿಕೊಳ್ಳಬೇಕು ಅಷ್ಟೆ" ಅಂತ ಅಂದಹಾಗಾಯ್ತು. ಹುಡುಕಬೇಕು ಎಂದುಕೊಳ್ಳುವಷ್ಟರಲ್ಲಿ ಸೈರನ್ನು: "ರೀ, ಎಲ್ಲಿದೀರಿ?" ತಪೋಭಂಗವಾಗಿಬಿಟ್ಟಿತು? "ಇಲ್ಲೇ ಇದ್ದೀನಿ" ಅಂತನ್ನುತ್ತ ಕಾಟಿನಿಂದ ಎದ್ದೆ.

ಸಮಾಧಾನದ ಸಂಗತಿಯೇನೆಂದರೆ ನಾನು ಕುರುಡನಲ್ಲ, ನನ್ನ ಮದುವೆಯಾಗಿದೆ. ಮಗ ಹುಟ್ಟಿದ್ದಾನೆ. ಅವನಿಗೂ ಮದುವೆ ಆಗಿ ಮಗ ಹುಟ್ಟಿದ್ದಾನೆ. ಬೇರೆಯವರು ಬೇರೆ ಬೇರೆ ಹೆಸರುಗಳಿಂದ ಅವನನ್ನು ಕರೆದರೂ ನಾನು ಮಾತ್ರ ನನ್ನ ಮೊಮ್ಮಗನಿಗೆ 'ಮಹಾರಾಜ' ಅಂತಲೇ ಕರೆಯುತ್ತೇನೆ. ಅವನು ಅಂಬಾರಿ ಏರುವುದನ್ನು ನೋಡುವುದು ನನ್ನ ಕನಸು.

ನಮಗೆ ಒಬ್ಬಳು ಮಗಳೂ ಇದ್ದಾಳೆ. ಅವಳಿಗೂ ಮದುವೆ ಆಗಿದೆ. ಇಬ್ಬರು ಮಕ್ಕಳು. ನಾವು ಅವರನ್ನು ಕರೆಯೋದು ಪುಟ್ಟ, ತುಂಟಿ ಅಂತಲೇ.

ಮೊನ್ನೆ ಸೂಟಿಗೆ ನಮ್ಮೂರಿಗೆ ಬಂದಿದ್ದರು ಇವರು. "ಅಜ್ಜ ಅಜ್ಜ..." ಅನ್ನುತ್ತ ಯಾವಾಗಲೂ ನನ್ನವಳ ಸುತ್ತಲೇ ಸುತ್ತುತ್ತಿರುತ್ತಾಳೆ ಈ ತುಂಟಿ. ಏನೇನೋ ಕಲಿಸುತ್ತಿರುತ್ತಾಳೆ ಇವಳು, ಅವಳು ಕಲಿಯುತ್ತಿರುತ್ತಾಳೆ, ರಾತ್ರಿ ಮಲಗುವಾಗ "ಅಜ್ಜ, ನಾಳೆ ನನ್ನನ್ನ ಆರು ಗಂಟೆಗೆ ಎಬ್ಬಿಸು" ಎಂದು ಆದೇಶ ಮಾಡಿದಳು. "ಅಷ್ಟು ಬೇಗ ಎದ್ದು ಏನು ಮಾಡುವುದಿದೆ ನಿನಗೆ?" ಕೇಳಿದಳಿವಳು. "ಒಂದು ಪಾಟ್‌ನಲ್ಲಿ ಬೀಜ ಇಟ್ಟು, ಮಣ್ಣು ಮುಚ್ಚಿ ನೀರು ಹಾಕಿದ್ದೀನಿ. ನಾಳೆ ಅದು ದೊಡ್ಡ ಗಿಡಾ ಆಗಿರತ್ತೈತಿ, ನೋಡಬೇಕು" ಅಂತ ವಿವರಿಸಿದಳು.

"ಒಂದ ರಾತ್ರಿ ಕಳಿಯೂದರಾಗ ಗಿಡಾ ಆಗೂದಿಲ್ಲ" ಅಂತ ಹೇಳಿದರೂ ಕೇಳಲಿಲ್ಲ. "ಆಗಿರತ್ತೈತಿ, ನನಗ ನೋಡಬೇಕು" ಅಂದಳು.

"ಗಿಡಾ ಆಗಬೇಕಾದರ ಬೆಳಕ ಬೇಕಲಾ?"

"ಕೊಟ್ಟೀನಿ ಅಜ್ಜಿ, ಅದಕ ಬ್ಯಾಟ್ರಿ ಹಿಚುಕಿ ಹಿಚುಕಿ ಬೆಳಕ ಕೊಟ್ಟಿದೀನಿ" ಎಂದಾಗ ಇವಳು 'ಥ'ಣ್ಣಗ ಗಾರ್! ನಾನು ಮೂಕಪ್ರೇಕ್ಷಕ!?

"ನಾಳೆ ಅದು ಗಿಡ ಆಗಿ ಮ್ಯಾಲ ಬಂದಿರತ್ತೈತಿ. ನಾ ಅದನ್ನ ನೋಡಬೇಕು, ನನ್ನ ಆರ ಗಂಟೇಗೆ ಎಬ್ಬಿಸು" ಅಂದಳು. "ಎಬ್ಬಿಸತೇನಮ್ಮ ಮಹಾರಾಯ್ತಿ" ಅಂತ ಆಶ್ವಾಸನೆ ಕೊಟ್ಟ ಮೇಲೆಯೇ "ಥ್ಯಾಂಕ್ಸ್" ಹೇಳಿ ಮಲಗಿದಳು.

**–ಹ.ಶಿ. ಭೈರನಟ್ಟಿ**

WISH YOU ALL OF THEM JULY 2019 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | | |
|---|---|---|
| 1 | Latha | Mysuru |
| 2 | Usha | Mantralaya |
| 3 | Shamala | Moodbidre |
| 4 | Sindhu B Rupesh | IAS Officer |
| | Renuka Chidambaram | IAS Officer |
| 5 | Hima | Delhi |
| 6 | Sowbhagya | Mysuru |
| 7 | Shilpa | Calicut |
| 8 | Jalaja | Bengaluru |
| 9 | Neelambari | Bangalore |
| 10 | Shalini | Mandya |
| 11 | Radhika | Ooty |
| 12 | Ramya | Belgaum |
| 13 | Malathi | Karwar |
| 13 | Parimala | Poona |
| 14 | Tulasi | Nanjangud |
| 15 | Vandana Gurnani | IAS Officer |

| | | |
|---|---|---|
| 16 | Kalashree | Kolar |
| 17 | Shilpashree | Maddur |
| 18 | Manjula | Ranibennur |
| 19 | Shreekala | Kundapur |
| 20 | Ragini | Guntur |
| 21 | Indrakshi | Mandya |
| 22 | Gamini | Bengaluru |
| 23 | Shantha | Puttur |
| 24 | Manjushree N | IAS Officer |
| 25 | Vinoth Priya R | IAS Officer |
| 26 | Janaki | Shimogga |
| 27 | Sheela | Bellary |
| 28 | Ganga | Mysuru |
| 29 | Deepti | Calicut |
| 30 | Rohini | Coimbattur |
| 31 | Kanaka | Jaipur |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**1. ಸುರೇಶ, ಬೆಂಗಳೂರು**

ಹೆಂಡತಿಗೆ ಪ್ರಿಯವಾಗುವ ಮಾತು ಯಾವುದು ಸಾರ್?

–ಆಯ್ತು ಬಿಡು– ನೀನು ಹೇಳಿದ ಹಾಗೆ ಆಗಲಿ.

**2. ರಮೇಶ, ಹಾಸನ**

ಗಂಡಸಿಗೆ ಹೊಟ್ಟೆ ಬಂದರೆ ಸುಖ ಪುರುಷ ಅಂತಾರೆ, ಹೆಣ್ಣಿಗೆ ಹೊಟ್ಟೆ ಬಂದರೆ?

–ಮದುವೆಗೆ ಮುಂಚೆ ಬಂದರೆ ಪರಪುರುಷ, ಆದ್ಮೇಲೆ ಬಂದ್ರೆ ಗಂಡನ ಪೌರುಷ ಅಂತಾರೆ!

**3. ರಾಮಣ್ಣ, ಮಂಡ್ಯ**

ಕನ್ನಡಿಗೂ, ಭೂತಕನ್ನಡಿಗೂ ವ್ಯತ್ಯಾಸವೇನು?

–ಕನ್ನಡಿ ಒಡವೆ ತೋರಿಸುತ್ತೆ, ಭೂತಕನ್ನಡಿ ಮೊಡವೆ ತೋರಿಸುತ್ತೆ.

**4. ಗುಂಡಣ್ಣ, ಬೆಂಗಳೂರು**

ಹೆಣ್ಣು ಮುನಿದರೆ ಮಾರಿ, ಗಂಡು?

–ವೆರಿ ಸಿಂಪಲ್, ಹುಡುಕುತ್ತಾನೆ ಬಾರಿಗೆ ದಾರಿ

**5. ಮಲ್ಲಣ್ಣ, ಮೈಸೂರು**

ಬಸವಣ್ಣನವರ ಕಲ್ಯಾಣಕ್ಕೂ, ಈಗಿನ ಕಲ್ಯಾಣ ಮಂಟಪಗಳಿಗೂ ಏನು ವ್ಯತ್ಯಾಸ?

–ಬಸವಣ್ಣನವರದು ಅನುಭವ ಮಂಟಪ, ಈಗಿನವರದ್ದು ಮಂಟಪದಲ್ಲಿ ಅನುಭವ

**6. ಶೇಖರ್ ಹಾಸನ**

ನದಿಗಳಿಗೆ ಹೆಣ್ಣಿನ ಹೆಸರು: ಬೆಟ್ಟಗಳಿಗೇಕೆ ಗಂಡಸರ ಹೆಸರು?

– ನದಿ ತವರಿನಿಂದ ಬೇರೆಡೆಗೆ ಸಾಗುವ ಹೆಣ್ಣು: ಬೆಟ್ಟ ಇದ್ದಲ್ಲೇ ಬಿದ್ದಿರುವ ಗಂಡು.

**7. ಮಧುಸೂಧನ್, ಬಂಗಾರಪೇಟೆ**

ನೂರಾರು ಕೋಟಿ ಜನಸಂಖ್ಯೆಯಿರುವ ನಮ್ಮ ದೇಶದಲ್ಲಿ ನನಗೆ ಒಂದು ಹುಡುಗಿ ಸಿಗುತ್ತಿಲ್ಲವಲ್ಲ ಸ್ವಾಮಿ?

– ಸಿಗೋ ಹುಡುಗಿಯರನ್ನು ಸೆಟ್ ಮಾಡಿಕೊಳ್ಳುವುದನ್ನು ಕಲಿಯಬೇಕು.

**8. ವೀರಣ್ಣ, ಹುಬ್ಬಳ್ಳಿ**

ವಿಕ್ರಮ–ಬೇತಾಳರ ಕತೆಗಳು ಈಗ ಯಾಕಿಲ್ಲ?

– ವಿಕ್ರಮರು ಕಮ್ಮಿಯಾಗಿ ಬೇತಾಳರು ಜಾಸ್ತಿಯಾಗಿದ್ದರಲ್ಲ ಏನ್ಮಾಡೋದು?

**9. ಸರೋಜ, ಊಟಿ**

ಇದ್ದುದರಲ್ಲಿ ಸಣ್ಣ ಜೀವಿಯಾದ ಇರುವೆ ಕೂಡಾ ಮನುಷ್ಯರಿಗೆ ಹೆದರುವುದಿಲ್ಲವಲ್ಲ?

– ಹೆಂಡತಿಯೇ ಹೆದರೊಲ್ಲ ಎಂದ ಮೇಲೆ ಇರುವೆ ತಾನೆ ಯಾಕೆ ಹೆದರುತ್ತದೆ?

**10 ಚಂದನ್, ಬೆಂಗಳೂರು.**

ಪ್ರೇಯಸಿಯ ಮೇಲಿನ ಪ್ರೀತಿಗೂ, ಪತ್ನಿಯ ಮೇಲಿನ ಪ್ರೀತಿಗೂ ಏನು ವ್ಯತ್ಯಾಸ?

– ಅರ್ಥ ಮಾಡಿಕೊಳ್ಳಿ. ಒಂದು ಕಾರಂಜಿ: ಇನ್ನೊಂದು ಪ್ರಶಾಂತವಾದ ನದಿ.

# ನಕ್ಕರೆ ಅದೇ ಸ್ವರ್ಗ



ನಗು ಮಾನವರಿಗೇ ಮೀಸಲಾದ ಮುಖ ಚರ್ಯೆಯೋ, ಇತರ ಪ್ರಾಣಿಗಳಲ್ಲೂ ಕಂಡುಬರು ವುದೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಯಾವ ಸಂದರ್ಭಗಳಲ್ಲಿ ಏತಕ್ಕಾಗಿ ನಗುವಿನ ಪ್ರತಿಕ್ರಿಯೆ ಯುಂಟಾಗುತ್ತದೆ ಎಂಬ ಸಮಸ್ಯೆ ಮನಃಶ್ಯಾಸ್ತಜ್ಞರ ಗಮನವನ್ನು ಸೆಳೆದಿದೆ.

ಪ್ರಾಣಿಗಳ ಪ್ರತಿಯೊಂದು ಮುಖಚರ್ಯೆಯೂ ಒಂದೊಂದು ಮನಃಪ್ರವೃತ್ತಿಗೆ ಸೇರಿರುತ್ತದೆ. ಮನಃಶಾಸ್ತ್ರಜ್ಞರಲ್ಲಿ ಕೆಲವರು, ನಗು ಹುಟ್ಟುಗುಣಗಳ ಗುಂಪಿಗೆ ಸೇರಿದೆಯೆಂದೂ ಇತರರು ಭಾವಗಳ ಗುಂಪಿಗೆ ಸೇರಿವೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ನೇರವಾಗಿ ಹೀಗೆ ವಿಭಾಗಿಸಿ ಹೇಳುವುದು ಕಷ್ಟವಾದರೂ ಭಾವಗಳ ಜೊತೆ ನಗುವಿಗೆ ನಿಕಟವಾದ ಸಂಪರ್ಕವಿದೆ ಎಂದು ಹೇಳಬಹುದು. ಅಂದರೆ ಸಂತೋಷ, ಭಯ, ಕೋಪ ಮುಂತಾದ ಭಾವಗಳು ಪ್ರಚೋದಿತವಾದಾಗ ಅನೇಕ ವೇಳೆ ಅವುಗಳ ಜೊತೆ ನಗುವಿನ ಪ್ರತಿಕ್ರಿಯೆಯನ್ನೂ ಕಾಣಬಹುದು. Laughter gives us distance . It allows us to step back from an event , deal with it and then move on ಎನ್ನುತ್ತಾರೆ.

**ನಗುವಿನ ಹುಟ್ಟು ಮತ್ತು ಬೆಳವಣಿಗೆ**

ಮಕ್ಕಳ ಮಾನಸಿಕ ಬೆಳವಣಿಗೆಯನ್ನು ವಿವರವಾಗಿ ಅಧ್ಯಯಿಸಿರುವ ಮನಃಶಾಸ್ತ್ರಜ್ಞರು ಹುಟ್ಟಿದಂದಿನಿಂದ ಮಕ್ಕಳ ಚಲನವಲನಗಳನ್ನು ವೀಕ್ಷಿಸಿ, ನಗು ಯಾವಾಗ ವ್ಯಕ್ತವಾಗುವುದು ಎಂಬುದನ್ನು ಸೂಚಿಸಿದ್ದಾರೆ. ಹುಟ್ಟಿದ 2–3 ವಾರಗಳಲ್ಲಿ ಮಕ್ಕಳು ಹಾಲು ಕುಡಿದು ತೃಪ್ತಿ ಹೊಂದಿದಾಗಲೂ ಮೆತ್ತನೆಯ ಬೆಚ್ಚಗಿರುವ ಬಟ್ಟೆಯಿಂದ ಉಂಟಾಗುವ ದೈಹಿಕ ತೃಪ್ತಿಯಿಂದಲೂ, 5–6 ವಾರಗಳಲ್ಲಿ ತಾಯಿಯನ್ನೂ ಕಂಡಾಗಲು 10– 11 ವಾರಗಳಲ್ಲಿ ತಾಯಿ ನಕ್ಕಾಗ ಅದಕ್ಕೆ ಪ್ರತಿಕ್ರಿಯೆ ಯಾಗಿಯೂ 11 – 12 ವಾರಗಳಲ್ಲಿ ಮಿರುಗುವ ಬಣ್ಣಬಣ್ಣದ ಸಾಮಾನುಗಳನ್ನು ಕಂಡಾಗಲೂ ಮುಗುಳು ನಗುತ್ತವೆ. 14 ವಾರದ ಮಕ್ಕಳಿಗೆ ಕಚಗುಳಿ ಇಟ್ಟಾಗ, ಅಂಗಾಲು ಮುಂತಾದ ಜಾಗಗಳನ್ನು ಮೃದುವಾಗಿ ಸ್ಪರ್ಶಿಸಿದಾಗ ಹಿಂದಕ್ಕೂ ಮುಂದಕ್ಕೂ ತೂಗಾಡಿಸಿದಾಗ 16 ವಾರಗಳಲ್ಲಿ ಮಗುವಿನ ಮುಂದೆ ನಾವು ನಮ್ಮ ಮುಖಕ್ಕೆ ಒಂದು ಬಟ್ಟೆಯನ್ನು ಮುಸುಕು ಹಾಕಿಕೊಂಡು ಕೂಡಲೇ ಅದನ್ನು ತೆಗೆದಾಗ, ಮಗುವಿನ ಮುಂದೆ ಕಾಗದವನ್ನು ಪರಪರ ಶಬ್ದವಾಗುವಂತೆ ಹರಿದಾಗ ನಗುತ್ತವೆ. 24 ವಾರಗಳಲ್ಲಿ ಮಗುವನ್ನು ಕೈಯಲ್ಲಿ ಹಿಡಿದು ಮೇಲಕ್ಕೆ ಹಾರಿಸಿ ಕೆಳಗೆ ಬರುವಾಗ ಆತುಕೊಂಡಾಗ, ಮಕ್ಕಳು ಮೊದಲಲ್ಲಿ ಸ್ವಲ್ಪ ಭಯಗೊಂಡರೂ ಇದರಿಂದ ತಮಗೆ ಯಾವ ಅಪಾಯವಿಲ್ಲದಿರುವುದನ್ನು ಗಮನಿಸಿದ ಕೆಲವು ಕ್ಷಣಗಳಲ್ಲಿಯೇ ಕೇಕೆ ಹಾಕಿ ನಗುತ್ತವೆ.

ಮಗುವಿಗೆ ವಯಸ್ಸಾದಂತೆ ನಗುವನ್ನು ಪ್ರೇರಿಸುವ ಸನ್ನಿವೇಶಗಳೂ ಹೆಚ್ಚುತ್ತವೆ. 1–2 ವರ್ಷದ ಮಕ್ಕಳು ತಾವೇ ಯಾವುದಾದರೂ ಕೆಲಸವನ್ನು ಮಾಡಿದಾಗ ಉತ್ಸಾಹಪೂರಿತ ಹೆಮ್ಮೆಯ ನಗುವನ್ನು ಹೊರಸೂಸುತ್ತದೆ. ಆಟವಾಡುವಾಗ ನಗುವೂ ಅವಕ್ಕೆ ಆಟದಲ್ಲೊಂದು ಮುಖ್ಯ ಅಂಶವಾಗಿರುತ್ತದೆ. ತಂದೆ ತಾಯಿಯರು ಕೋಪಗೊಂಡಾಗ ಅವು ತಾವು ನಕ್ಕು ಅವರ ಕೋಪವನ್ನು ಹೋಗಲಾಡಿಸಲೆತ್ನಿಸುತ್ತವೆ. ಮಕ್ಕಳು ಬೆಳೆದಂತೆಲ್ಲ ನಗುವನ್ನು ಪ್ರಚೋದಿಸುವ ಸಂದರ್ಭಗಳೂ ಬೆಳೆಯುತ್ತವೆ. ಚಿಕ್ಕಂದಿನಿಂದ ಕಾಲಕಾಲಕ್ಕೆ ಸೂಕ್ತ ರೀತಿಯ ನಗುವಿನ ಪ್ರತಿಕ್ರಿಯೆಯನ್ನು ವ್ಯಕ್ತಮಾಡು ವುದರಿಂದ ಅವುಗಳ ರಾಗಭಾವಗಳ ಬೆಳವಣಿಗೆ ಅದ ಕ್ಕಿಂತ ಮಿಗಿಲಾಗಿ ಅವುಗಳ ಸಾಮಾಜಿಕ ಬೆಳವಣಿಗೆ ಸುಗಮ ವಾಗಿ ಸಾಗುತ್ತಿದೆ ಎಂದು ನಾವು ತಿಳಿಯಬಹುದು.

**ನಗುವನ್ನು ಪ್ರಚೋದಿಸುವ ಸಂದರ್ಭಗಳು**

ಹರ್ಷದ ನಗೆ, ವಿನೋದದ ನಗೆ, ವ್ಯಂಗ್ಯ ನಗೆ, ತಿರಸ್ಕಾರದ ನಗೆ, ದೌರ್ಬಲ್ಯದ ನಗೆ ಮುಂತಾದ ನಾನಾ ಬಗೆಯ ನಗೆಗಳಿವೆಯಾಗಿ ನಗೆಯನ್ನು ಒಂದೇ ಒಂದು ಪ್ರಚೋದನಾ ಸೂತ್ರಕ್ಕೆ ಅಳವಡಿಸುವುದು ಅಸಾಧ್ಯ. Through humor, you can soften some of the Worst blows that life delivers and once you find laughter , no matter how painful your situation might be , you can survive.

ಯಾರಾದರೂ ಬೀದಿಯಲ್ಲಿ ಕಾಲುಜಾರಿ ಬಿದ್ದಾಗ ಅದನ್ನು ನೋಡಿದವರು ಸಾಧಾರಣವಾಗಿ ಪಕ್ಕನೆ ನಗುತ್ತಾರೆ. ಈ ನಗುವಿಗೆ ಕಾರಣವೇನು ಎಂಬುದರ ಬಗ್ಗೆ ಕೆಲವು ವಾದಗಳಿವೆ. ಅವು ಯಾವುದೆಂದರೆ – 1) ಕಾಲು ಜಾರಿ ಬೀಳುವ ಪ್ರಸಂಗ ವಿನೋದಕರ ವಾಗಿರುವುದರಿಂದ 2) ಜಾರಿಬಿದ್ದವರ ದುರ್ದೆಶೆಯನ್ನು ನೋಡಿ ಮರುಗಿ, ಕನಿಕರಿಸಿ ಅಸಹಾನುಭೂತಿಯಿಂದ

ನೋಡಿದವರಲ್ಲಿ ಉಂಟಾಗುವ ಒಂದು ಬಗೆಯ ಮೂಕವೇದನೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ 3) ಇತರರ ದುರ್ದೆಶೆಗಳನ್ನು ಪರಿಗಣಿಸಿದಾಗ ಅವರಿಗಿಂತ ನಾವು ಉತ್ತಮ ಸ್ಥಿತಿಯಲ್ಲಿದ್ದೇವೆ ಎಂಬ ಅಂಶ ನಮ್ಮ ಮನಸ್ಸಿನಲ್ಲಿ ಮೂಡಿ ಅದನ್ನು ಸೂಚಿಸುವ ಸಲುವಾಗಿ. ಆರೋಗ್ಯವಾಗಿ ದೃಢಕಾಯರಾಗಿರುವವರಲ್ಲಿನ ಹೆಚ್ಚಿನ ನರಗಳ ಶಕ್ತಿ ಕೆಲವೊಮ್ಮೆ ಪ್ರೇರಕವಾಗಿ ನಗುವಿನ ಮೂಲಕ ಹೊರಹೊಮ್ಮುವುದು ಎಂದು ಒಂದು ವಾದ (ಸ್ಪೆನ್ಸರ್).

ನಮ್ಮ ಅಶ್ಲೀಲ ಹಾಗೂ ವೈರದ ಭಾವನೆಗಳು, ನಗುವಿನ ಮೂಲಕ ತೃಪ್ತಿ ಹೊಂದುತ್ತದೆ ಎಂದು ಮನೋವಿಶ್ಲೇಷಕರೊಬ್ಬರ ಅಭಿಪ್ರಾಯ (ಫ್ರಾಯ್ಡ್). ಹೇಗೆಂದರೆ ನಮ್ಮ ದುರುದ್ದೇಶ, ಮತ್ಸರ, ವೈರ, ಅನುಚಿತ, ಅಶ್ಲೀಲ ಭಾವನೆಗಳನ್ನು ಇತರರೊಡನೆ ನೇರವಾಗಿ ವ್ಯಕ್ತಮಾಡುವುದನ್ನು ಸಮಾಜ ನಿಷೇಧಿಸುತ್ತದೆ. ಹಾಗಾಗಿ ಅವು ಅತೃಪ್ತ ಬಯಕೆಗಳಾಗಿಯೇ ಉಳಿಯುತ್ತವೆ. ಅಲ್ಲದೆ ಮನಸ್ಸಿನ ಆತಂಕ, ಕಳವಳವನ್ನು ಹೆಚ್ಚಿಸುತ್ತವೆ. ಅಂಥ ಸಂದರ್ಭಗಳಲ್ಲಿ ಮನಸ್ಸಿನ ಆಳದಲ್ಲಿರುವ ಭಾವಗಳನ್ನು ನಗುವಿನ ಮೂಲಕ ಹೊರಗೆಡವಿದಾಗ ಮನಸ್ಸು ಹಗುರವಾಗುತ್ತದೆ.

ನಗೆಗೆ ನಾನಾ ಸಂದರ್ಭಗಳೂ ಕಾರಣಗಳೂ ಪ್ರೇರಕವಾಗಿದೆ. ಹಾಸ್ಯಕರ ಸನ್ನಿವೇಶ ಹಾಸ್ಯದ ನಗೆಗೂ ಸಂತೋಷಕರ ಸನ್ನಿವೇಶ, ಸಂತೋಷದ ನಗೆಗೂ ಎಡೆಮಾಡಿಕೊಡುತ್ತದೆ. ಇದೇ ರೀತಿ ಅಣಕ ಅಥವಾ ವ್ಯಂಗ್ಯನಗೆ, ತಿರಸ್ಕಾರ ಮತ್ತು ಮೂದಲಿಕೆಯ ನಗೆ, ದೌರ್ಬಲ್ಯ ಸೂಚಕ ಸಮ್ಮತಿ–ಅಸಮ್ಮತಿ ಸೂಚಿಸುವ ನಗೆ, ಮೇಲ್ಮೈ ಮತ್ತು ಹೆಚ್ಚಳವನ್ನು ಪ್ರದರ್ಶಿಸುವ ಜಂಬದ ನಗೆ, ದಯೆ ಅಥವಾ ಕರುಣೆಯ ನಗೆ, ಪರಿಚಿತ ಮತ್ತು ಅಪರಿಚಿತ ಅತಿಥಿಗಳನ್ನು ಸ್ವಾಗತಿಸುವ ನಗೆ, ಇತರರನ್ನು ಅನುಸರಿಸುವ ನಗೆ, ಅಧಿಕಾರದ ನಗೆ, ಇತರರ ಗಮನ ಸೆಳೆಯುವ ನಗೆ, ಅಸಂಬದ್ಧ ಸನ್ನಿವೇಶದಿಂದ ಪ್ರೇರಿತವಾದ ನಗೆ, ಮನಸ್ಸಿನ ಕಳವಳ, ಭಯ, ದ್ವೇಷ ಇತ್ಯಾದಿ ಭಾವನೆಗಳನ್ನು ಮುಚ್ಚುವ ಸಲುವಾಗಿ ಒಣನಗೆ, ಮನಸ್ಸಿಗೆ ಬೇಡದಿದ್ದರೂ ಪರಿಸ್ಥಿತಿಯ ಸೆಳೆತಕ್ಕೆ ಒಳಪಟ್ಟ ಒಣನಗೆ, ನಗೆಯ ನಟನೆ, ಅಕಾರಣವಾಗಿ ನಗುವ ಮನೋವಿಕಾರಕ್ಕೆ ಒಳಪಟ್ಟವರ ಅವಾಸ್ತವಿಕ ಪ್ರಪಂಚಕ್ಕೆ ಸಂಬಂಧಿಸಿದ ಹುಚ್ಚುನಗೆ, ಇತ್ಯಾದಿಗಳೂ ಸಂದರ್ಭಾನುಚಿತವಾಗಿ ನಮ್ಮ ದಿನ ಚರಿಯ ನಾನಾ ನಡತೆಗಳೊಡನೆ ಹಾಸುಹೊಕ್ಕಾಗಿ ಬೆರೆತಿವೆ.

ನಗೆಯ ಪ್ರತಿಕ್ರಿಯೆ ಎಲ್ಲರಲ್ಲೂ ಏಕರೀತಿಯಾಗಿರುವುದಿಲ್ಲ. ಕೆಲವು ಬಗೆಯ ನಗೆಯ ಪ್ರತಿಕ್ರಿಯೆಗಳೆಂದರೆ, ಹಸನ್ಮುಖ, ಮುಗುಳ್ನಗೆ, ಹಲ್ಲುಗಳನ್ನು ಪ್ರದರ್ಶಿಸುವ ನಗೆ, ಶಬ್ದ ಮಾಡಿ ಇಡೀ ದೇಹವನ್ನು ಕುಲುಕಿಸುತ್ತ ನಗುವ ನಗೆ ಇತ್ಯಾದಿ. ಮುಗುಳ್ನಗೆ ಸುಂದರವಾದುದೆಂದೂ ಜೋರಾದ, ಹಲ್ಲುಗಳನ್ನು ಪ್ರದರ್ಶಿಸುವ ನಗೆ ಕುರೂಪದ್ದೆಂದೂ ಒಂದು ಅಭಿಪ್ರಾಯ (ಮೇಕಡುಗಲ್).



**ಜೀವನದಲ್ಲಿ ನಗುವಿನ ಪಾತ್ರ**

ನಗು ದುಃಖಕ್ಕೆ ಪ್ರತ್ಯೌಷಧವೆಂದೂ ಅಳುವುದನ್ನು ತಪ್ಪಿಸಲೂ ನಗು ಎಂದು ಹೇಳುವುದಿದೆ . ನಗು ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ ಜೀವನವನ್ನು ಸುಗಮವಾಗಿ ಮಾಡಬಲ್ಲದು. ನಗೆಯನ್ನು ನಮ್ಮ ಕಳವಳ, ಭಯ, ಕೋಪ ಮುಂತಾದ ಭಾವಗಳ ಪ್ರತಿನಿಧಿ ಎನ್ನಬಹುದು. ಹೇಗೆಂದರೆ ನಮ್ಮ ಈ ಭಾವಗಳನ್ನು ನೇರವಾಗಿ ಅಲ್ಲದಿದ್ದರೂ ನಗೆಯ ಮೂಲಕ ಸೂಚಿಸಬಹುದು. ನಮ್ಮ ತಪ್ಪು, ದುರ್ದೆಶೆಗಳತ್ತ ನಾವೇ ನಗುವ ಪ್ರವೃತ್ತಿಯನ್ನು ಬೆಳೆಸಿಕೊಂಡಲ್ಲಿ, ಜೀವನದಲ್ಲಿ ನಿರಾಶಾವಾದಿಗಳಾಗುವುದು ತಪ್ಪುತ್ತದೆ. ಮಾನಸಿಕ ಆರೋಗ್ಯವನ್ನು ಉತ್ತಮ ಮಟ್ಟದಲ್ಲಿಟ್ಟು ಕೊಳ್ಳಲು ಸಾಧ್ಯವಾಗುತ್ತದೆ.

ಸಂಘಜೀವನದಲ್ಲಿ ನಗುವಿನ ಪಾತ್ರ ಮುಖ್ಯವಾದುದು. ನಾವು ಏಕಾಂಗಿಯಾಗಿದ್ದಾಗ ನಗುವುದಕ್ಕಿಂತ ಹೆಚ್ಚಾಗಿ ಇತರರೊಡನಿದ್ದಾಗ ನಗುವುದು ಸಹಜ. ಇತರರು ನಕ್ಕಾಗ, ಅದರ ಕಾರಣ ತಿಳಿಯದಿದ್ದರೂ ಅವರ ನಗೆಯೇ ಪ್ರಚೋದಕವಾಗಿ ಶ್ರೋತೃಗಳಲ್ಲಿ ನಗು ಮೂಡುತ್ತದೆ. ಯಾವುದಾದರೊಂದು ಸಾಮಾಜಿಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಗಳಾದ ಪ್ರೇಕ್ಷಕ ಅಥವಾ ಶ್ರೋತೃ ವರ್ಗದವರೆಲ್ಲರೂ ಪರಸ್ಪರ ಪರಿಚಯಸ್ಥರಲ್ಲದಿದ್ದರೂ ಎಲ್ಲರೂ ಒಂದೇ ಕಾರಣಕ್ಕಾಗಿ ನಕ್ಕಾಗ ಅವರಲ್ಲಿ ತಾವೆಲ್ಲರೂ ತಾತ್ಕಾಲಿಕವಾಗಿ ಒಂದು ಗುಂಪಿಗೆ ಸೇರಿದವರೆಂಬ ಭಾವನೆ ಮೊಳೆಯುತ್ತದೆ.

ವಿಶ್ವದಾದ್ಯಂತದ 'ಲಾಫ್ಟರ್ ಯೋಗ' ಚಳವಳಿಯ ಸಂಸ್ಥಾಪಕರಾದ ಡಾ. ಮದನ್ ಕಟಾರಿಯಾ ಭಾರತದ ಕುಟುಂಬ ವೈದ್ಯರು, ಲಾಫ್ಟರ್ ಯೋಗ ಚಳವಳಿಯನ್ನು ಭಾಗಶಃ ಮುಖದ ಪ್ರತಿಕ್ರಿಯೆ ಕಲ್ಪನೆಯಿಂದ ಪ್ರಾರಂಭಿಸಲೂ ಸ್ಫೂರ್ತಿ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಜನರನ್ನು ಒಟ್ಟುಗೂಡಿಸುವ ಮೂಲಕ ಏಕೈಕ ನಗುವಿನೊಂದಿಗೆ ಇದನ್ನು ಆಚರಿಸಲಾಗುತ್ತದೆ. ಇದರ ಜನಪ್ರಿಯತೆ ಅಗಾಧವಾಗಿ ಬೆಳೆದಿದೆ. ಲಾಫ್ಟರ್, ಯೋಗ ಚಳವಳಿಯೊಂದಿಗೆ ಈಗ 105ಕ್ಕೂ ಹೆಚ್ಚು ದೇಶಗಳಲ್ಲಿ ಹಬ್ಬಿದ್ದು ಸಾವಿರಾರು ನಗೆ ಕ್ಲಬ್‌ಗಳು, ನಗೆ ಹಬ್ಬಗಳು ಪ್ರಾರಂಭವಾಗಿವೆ.

**– ಜಗದೀಶ ವಡ್ಡಿನ, ಕಾರವಾರ**

RNI No. KARKAN/2015/71642 KA/SK/MYS/109/2017-2019

ರಾವ್ಸ್ ಅಕಾಡೆಮಿ
ಮೀಡಿಯ & ಎಜುಕೇಶನಲ್ ಪಬ್ಲಿಷರ್ಸ್
Rao's Academy
Media & Educational Publishers

**ಪ್ರತೀ ವರ್ಷ ರಾವ್ಸ್ ಅಕಾಡೆಮಿ ಅಭ್ಯಾಸ ಪುಸ್ತಕಗಳನ್ನು ಅಭ್ಯಸಿಸಿ ಐದು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರ್‍ಯಾಂಕ್ ಮತ್ತು ಡಿಸ್ಟಿಂಕ್ಷನ್ ಸ್ಥಾನವನ್ನು ತಮ್ಮದಾಗಿಸಿಕೊಳ್ಳುತ್ತಾರೆ.**

1) ತಜ್ಞ ಶಿಕ್ಷಕರುಗಳಿಂದ ರಚಿತ
2) ಪ್ರತಿ ಅಧ್ಯಾಯದಲ್ಲೂ ನೂರಾರು ಪ್ರಶ್ನೆಗಳು
3) ಉತ್ತರಿಸಲು ಅವಶ್ಯ ಸ್ಥಳಾವಕಾಶ
4) ಸಂದೇಹ ಪರಿಹಾರಕ್ಕೆ ಅವಕಾಶ
5) ವಿದ್ಯಾರ್ಥಿಗಳು ನೆನಪಿನಲ್ಲಿಡಲು ತುಂಬಾ ಸಹಕಾರಿ
6) ತರಗತಿ ಅಭ್ಯಾಸದೊಡನೆ ಬರೆದೂ–ಬರೆದು ಗ್ರಹಿಸಲು ಅನುಕೂಲಕಾರಿ
7) ಉತ್ತಮ ಮುದ್ರಣ–ಹಾಳೆಗಳು
8) ವಿದ್ಯಾರ್ಥಿ/ಶಿಕ್ಷಕ/ಪೋಷಕ –ಸ್ನೇಹಿ
9) ಕೈಗೆಟಕುವ ಬೆಲೆ
10) ಶಾಲೆ+ಶಿಕ್ಷಕರು+ರಾವ್ಸ್ ಪುಸ್ತಕ = ಗರಿಷ್ಠ ಅಂಕ ಗಳಿಕೆ

# 8th, 9th & SSLC
## WORK BOOKS/ಅಭ್ಯಾಸ ಪುಸ್ತಕಗಳು

**On all the Subjects Chapter wise Questions & Answers**

**98866-65990 99005-75990**

# 8, S.C. Road, Opp: Vinayaka Temple, Netkallappa Circle, Basavanagudi, Bengaluru - 04

Book Post

To

From
Mahila Vishesha
No. 03, City Bus Stand Building
2nd Floor, K.R. Circle
Mysuru - 570001

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642